# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 158 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.12.2024 • ಮಂಗಳವಾರ • ಪುಟ:04 • ಬೆಲೆ:2

Volume:02 • Issue: 158 • PRGI No:KARKAN/2023/88055 • VIJAYANAGARA • 24.12.2024 • Tuesday • Page:04 • Rs:2



BOOK YOUR ADVERTISEMENTS TO REACH MORE READERS

1,00,000+ Digital E-PAPER READERS

M: 94486 33038

Book Advance Get More Benefits

No.1 HAMPI TIMES LEADING VIJAYANAGARA District News Paper


# ಗಣಿತ ಕಲಿಯುವ ಆಸಕ್ತಿ ರೂಢಿಸಿಕೊಳ್ಳಿ

## ಗಣಿತಕ್ಕೆ ಶ್ರೀನಿವಾಸ ರಾಮಾನುಜನ್ ಕೊಡುಗೆ ಅಪಾರ | ಯಶಸ್ಸಿನ ಛಲ ಹೊಂದಿ ಸಾಧನೆಯ ಮೈಲಿಗಲ್ಲು ತಲುಪಿ

## ರಾಷ್ಟ್ರೀಯ ಗಣಿತ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಪಂ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಸಲಹೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಗಣಿತ ವಿಷಯವು ಕಬ್ಬಿಣದ ಕಡಲೆಯಲ್ಲ. ಬದಲಾಗಿ ಮೂಲ ಸೂತ್ರಗಳನ್ನು ಅರಿತುಕೊಂಡು, ಆಸಕ್ತಿಯಿಂದ ಗಣಿತ ವಿಷಯ ಕಲಿಯುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ. ಎಸ್.ಎಂ ಅವರು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು ಮತ್ತು ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್(ಸರ್ಕಾರಿ ಬಾಲಕಿಯರ ಪ್ರೌಢಶಾಲೆ)ನಲ್ಲಿ ಸೋಮವಾರ ಆಯೋಜಿಸಿದ್ದ ರಾಷ್ಟ್ರೀಯ ಗಣಿತ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜಕ್ಕೆ ಕೊಡುಗೆ ನೀಡಿದ ಮಹಾನ್ ಮೇಧಾವಿಗಳ ಸ್ಮರಣೆಗಾಗಿ ವಿವಿಧ ದಿನಾಚರಣೆ ಮಾಡಲಾಗುತ್ತದೆ. ಅದರಂತೆ ಶ್ರೇಷ್ಠ ಭಾರತೀಯ ಗಣಿತ ತಜ್ಞ ಶ್ರೀನಿವಾಸ ರಾಮಾನುಜನ್ ಅಯ್ಯಂಗಾರ್ ಅವರ ಜನ್ಮ ದಿನದ ಸವಿನೆನಪಿಗಾಗಿ ಡಿ.22 ರಂದು ರಾಷ್ಟ್ರೀಯ ಗಣಿತ ದಿನಾಚರಣೆ ಆಚರಿಸಲಾಗುತ್ತದೆ ಎಂದು ಅವರು ಹೇಳಿದರು.

ಶ್ರೀನಿವಾಸ ರಾಮಾನುಜನ್ ಅವರು ಅಪಾರ ಜ್ಞಾನ ಉಳ್ಳವರು. ಅವರು ತಮ್ಮ 32 ವಯಸ್ಸಿನಲ್ಲಿಯೇ ಯಶಸ್ಸಿನ ಛಲ ಹೊಂದಿ, ಸಾಧನೆಯ ಮೈಲಿಗಲ್ಲು






ತಲುಪಿದವರು. ಗಣಿತ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಅಪಾರ ಜ್ಞಾನ ಗಳಿಸುವಂತೆ ಗಣಿತ ವಿಷಯದಲ್ಲಿಯೂ ಸಹ ಪರಿಣಿತಿ ಹೊಂದುವುದು ಅಗತ್ಯವಾಗಿದೆ. ವಿದ್ಯಾರ್ಥಿನಿಯರು ತಳ ಮಟ್ಟದಲ್ಲಿಯೇ(ಬೇಸಿಕ್) ಗಣಿತ ವಿಷಯವನ್ನು ಅಚ್ಚುಕಟ್ಟಾಗಿ ಕಲಿತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪಿಎಸ್ ಶಾಲೆಯ ಮುಖ್ಯ ಶಿಕ್ಷಕರಾದ ಎ.ಭೈರಪ್ಪ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಗಣಿತ ವಿಷಯದ ಲೆಕ್ಕಚಾರ ತಿಳಿದುಕೊಂಡರೆ ದೈನಂದಿನದಲ್ಲಿ ಉತ್ತಮ ವ್ಯವಹಾರ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಗಣಿತ ಕ್ಷೇತ್ರದಲ್ಲಿ ವಿಶ್ವಕ್ಕೆ ಭಾರತದ ಕೊಡುಗೆ ಅಪಾರ. ವಿದ್ಯಾರ್ಥಿಗಳು ಗಣಿತ ವಿಷಯ ಕಲಿಯುವಲ್ಲಿ ಸಕ್ರೀಯವಾಗಿ ಪಾಲ್ಗೊಂಡು, ವಿವಿಧ ಆವಿಷ್ಕಾರ–ನೂತನ ಪ್ರಯೋಗಗಳಲ್ಲಿ ತೊಡಗಿಕೊಂಡು ಕೊಡುಗೆ ನೀಡಬೇಕು ಎಂದರು.

ಡಿಡಿಪಿಐ ಕಚೇರಿಯ ಗಣಿತ ವಿಷಯ ನಿರ್ವಾಹಕರಾದ ಬಸವರಾಜ.ಎಂ ಮಾತನಾಡಿ, ಗಣಿತ ವಿಷಯವು ಕ್ಲಿಷ್ಟಕರವಲ್ಲ. ಗಣಿತ ಜ್ಞಾನದಿಂದ ಮನೋವೃದ್ಧಿಯಾಗಲಿದ್ದು, ವಿದ್ಯಾರ್ಥಿಗಳು ಗಣಿತ ಪ್ರಾಮುಖ್ಯತೆ ಅರಿತುಕೊಂಡು ಗಣಿತ ಕಲಿಯುವ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳು ಪಿಯುಸಿಯಲ್ಲಿ ಗಣಿತ ವಿಷಯ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಪ್ರೌಢಶಾಲೆಯಲ್ಲಿಯೇ ಗಣಿತ ವಿಷಯದ ಜ್ಞಾನ ಸಂಪಾದಿಸಿಕೊಂಡು, ಉನ್ನತ ಶೈಕ್ಷಣಿಕ ವಿದ್ಯಾಭ್ಯಾಸ ಮುಂದುವರಿಸಬೇಕು ಎಂದು ವಿದ್ಯಾರ್ಥಿನಿಯರಿಗೆ ತಿಳಿಸಿದರು.

>>4


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

**ಹಂಪಿ ಟೈಮ್ಸ್**

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038

Email: hampitimes@gmail.com


**ಮೈಕ್ರೋ ನ್ಯೂಸ್**

## ಸ್ವಯಂಸೇವಕ ಗೃಹರಕ್ಷಕರ ನೋಂದಣಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಗೃಹರಕ್ಷಕ ದಳದಲ್ಲಿ ಖಾಲಿ ಇರುವ ಸ್ವಯಂ ಸೇವಕ ಗೃಹರಕ್ಷಕರ ನೊಂದಾಣಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಗೃಹರಕ್ಷಕದಳದ ಜಿಲ್ಲಾ ಸಮಾದೇಷ್ಟರಾದ ಬಸವರಾಜ ಅಗಸರ ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹೊಸಪೇಟೆ, ಕಮಲಾಪುರ, ಹಗರಿಬೊಮ್ಮನಹಳ್ಳಿ, ಹಡಗಲಿ ಹಾಗೂ ಹಲವಾಗಲು ಘಟಕಗಳಲ್ಲಿ ಪ್ರಸ್ತುತ ಖಾಲಿ ಇರುವ ಸ್ವಯಂ ಸೇವಕ ಗೃಹರಕ್ಷಕ ಮತ್ತು ಗೃಹರಕ್ಷಕಿಯರ ನೊಂದಾಣಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಕಚೇರಿಗಳಿಂದ ಅರ್ಜಿ ಪಡೆದು ಅರ್ಹತೆ ಮತ್ತು ಸೂಚನೆಗಳನ್ನು ಪಾಲಿಸಿ ಜ.24 ರೊಳಗೆ ಅರ್ಜಿಯನ್ನು ಭರ್ತಿ ಮಾಡಿ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಜಿಲ್ಲಾ ಸಮಾದೇಷ್ಟರ ಕಚೇರಿ, ಗೃಹರಕ್ಷಕ ದಳ, ಜಿಲ್ಲಾ ಕ್ರೀಡಾ ಸಂಕೀರ್ಣ, ವಿಎನ್‌ಸಿ ಕಾಲೇಜು ಮೈದಾನದ ಹತ್ತಿರ, ಡಿಡಿಪಿಐ ಕಚೇರಿ ಹಿಂದುಗಡೆ ಹೊಸಪೇಟೆಯಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08394–221337 ಕರೆ ಮಾಡಬಹದು ಎಂದು ತಿಳಿಸಿದ್ದಾರೆ.


ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ

ಜಾಹೀರಾತುಗಳಿಗೆ
ವಿಶೇಷ ರಿಯಾಯತಿ

ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.

ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038


# ರಾಷ್ಟ್ರಪ್ರೇಮ ರಾಷ್ಟ್ರಸೇವೆ ನಮ್ಮ ಸಂಕಲ್ಪವಾಗಲಿ

## ವಿಜಯನಗರ ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷ ಎನ್.ಮಲ್ಲಿಕಾರ್ಜುನ ಮೆಟ್ರಿ ಹೇಳಿಕೆ | ಎನ್‌ಎಸ್‌ಎಸ್ ಶಿಬಿರ ಉದ್ಘಾಟನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅರಿವು ಮೂಡಿಸುತ್ತದೆ. ಜನಸಾಮಾನ್ಯರ ಬದುಕು ಅರ್ಥೈಸಿಕೊಂಡು, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ವಿಜಯನಗರ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಎನ್.ಮಲ್ಲಿಕಾರ್ಜುನ ಮೆಟ್ರಿ ಹೇಳಿದರು.

ತಾಲೂಕಿನ ಮಲಪನಗುಡಿಯಲ್ಲಿ ಶಾಲಾ ಶಿಕ್ಷಣ ಇಲಾಖೆ, ವೀ.ವಿ.ಸಂಘ ವಿಜಯನಗರ ಪದವಿಪೂರ್ವ ಮಹಾವಿದ್ಯಾಲಯದದಿಂದ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಗ್ರಾಮೀಣ ಜನರ ಪ್ರೀತಿ ದೊರೆಯುತ್ತದೆ. ಸ್ವಚ್ಛತೆಯ ಅರಿವು ಮೂಡಿಸುವುದರ ಜೊತೆ ಲಿಂಗ ಸಮಾನತೆ ಸಾಧಿಸಬೇಕಿದೆ. ಹೆಣ್ಣು ಭ್ರೂಣ ಹತ್ಯೆ ನಿಲ್ಲಿಸುವಂತೆ ಅರಿವು ಮೂಡಿಸಬೇಕು. ಹೆಣ್ಣಿಲ್ಲದ ಸಮಾಜ ಊಹಿಸಲು ಅಸಾಧ್ಯ. ಹೆಣ್ಣು ಸಮಾಜದ ಕಣ್ಣು ಎಂಬುದನ್ನು ಪ್ರತಿಯೊಬ್ಬರು ಅರಿಯಬೇಕು. ರಾಷ್ಟ್ರಪ್ರೇಮ, ರಾಷ್ಟ್ರಸೇವೆಯೇ ನಮ್ಮ ಸಂಕಲ್ಪವಾಗಬೇಕು ಎಂದರು.




ಕಾಲೇಜಿನ ಪ್ರಾಚಾರ್ಯ ಕೆ.ಮಲ್ಲಿಕಾರ್ಜುನಗೌಡ ಅಧ್ಯಕ್ಷತೆವಹಿಸಿ ಮಾತನಾಡಿ, ಪ್ರತಿಜ್ಞಾವಿಧಿ ಬೋಧಿಸಿದರು.

ಶಿಬಿರದ ಯೋಜನಾಧಿಕಾರಿ ಕೆ.ಶರಣಬಸವ ಹಸಮಕಲ್ ಪ್ರಾಸ್ತಾವಿಕ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಸಾಮಾಜಿಕ ಜವಾಬ್ದಾರಿ ಮತ್ತು ದಾನದ ಮಹತ್ವ ತಿಳಿಸಲಾಗುತ್ತದೆ. ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳ ಸುದಾರಣೆ ಮಾಡುವ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಶಿಸ್ತು, ಪ್ರಾಮಾಣಿಕತೆ ಮತ್ತು ಉತ್ತಮ ನಾಯಕತ್ವ ಗುಣಗಳನ್ನು ಶಿಬಿರದಲ್ಲಿ ಭಾಗವಹಿಸುವುದರಿಂದ ಬೆಳೆಸಿಕೊಳ್ಳಬಹುದಾಗಿದೆ ಎಂದರು.

ಶಿಬಿರದಲ್ಲಿ ನಿರಂಜನ ಉಪನ್ಯಾಸಕರಾದ ಎಚ್.ಎಂ.ನಿರಂಜನ, ಡಾ.ಗಾದೆಪ್ಪ, ಜಿ.ಶಿವಕುಮಾರ, ಸಂಪತ್, ಡಿ.ರವಿಕಿರಣ್, ಟಿ.ಎಂಪ್ರಭುಸ್ವಾಮಿ, ಡಾ.ಶಿವಮಲ್ಲಿಕಾರ್ಜುನ ಇತರರು ಇದ್ದರು.

**ಆನಂದ ಬಾಣ**




# ಪ್ರತಿಯೊಬ್ಬರ ಸುರಕ್ಷತೆ ಎಲ್ಲರ ಹೊಣೆ ಕಾನೂನು ಅರಿಯಲು ಹಿಂಜರಿಕೆ ಬೇಡ

## ಹಂಪಿ ಪಿಎಸ್‌ಐ ಶಿವಕುಮಾರ ನಾಯ್ಕ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸಿಗರು ಸೇರಿದಂತೆ ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅಗತ್ಯ. ಕಾನೂನನ್ನು ತಿಳಿದು ನಡೆದಾಗ ಸುಸ್ಥಿರ ಸಮಾಜ ನಿರ್ಮಿಸಲು ಸಾಧ್ಯ. ಕಾನೂನಿನ ಅರಿವು ಅಪರಾಧಗಳನ್ನು ತಡೆಯಲು ಸಹಕಾರಿಯಗಿದೆ ಎಂದು ಹಂಪಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶಿವಕುಮಾರ ನಾಯ್ಕ. ಎಲ್ ಹೇಳಿದರು.

ವಿಶ್ವಪ್ರಸಿದ್ಧ ಹಂಪಿಯಲ್ಲಿ ಹಂಪಿ ಪ್ರವಾಸಿ ಪೊಲೀಸ್ ಠಾಣೆಯಿಂದ ಅಪರಾಧ ತಡೆ ಮಾಸಾಚರಣೆ ನಿಮಿತ್ತ ಪ್ರವಾಸಿಗರಿಗೆ ಜಾಗೃತಿ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದರು. ಹಂಪಿಗೆ ಲಕ್ಷಾಂತರ ದೇಶ ಮತ್ತು ವಿದೇಶಗಳಿಂದ ಪ್ರವಾಸಿಗರು, ವಿದ್ಯಾರ್ಥಿಗಳು ಆಗಮಿಸುತ್ತಿದ್ದಾರೆ. ಆಟೋ ಚಾಲಕರು, ಪ್ರವಾಸಿ ಗೈಡುಗಳು ಎಲ್ಲರ ಸುರಕ್ಷತೆಗೆ ಆದ್ಯತೆ ನೀಡಬೇಕು. ಧಾರ್ಮಿಕ ಕ್ಷೇತ್ರಗಳ ಪಾವಿತ್ರ್ಯತೆಗೆ ಧಕ್ಕೆಯಾಗದಂತೆ ಪ್ರತಿಯೊಬ್ಬರೂ ನಡೆದುಕೊಳ್ಳಬೇಕು. ಪೊಲೀಸರು ಜನಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರವಾಸಿಗರಲ್ಲಿ ಏನಾದರೂ ಗೊಂದಲಗಳಿದ್ದರೆ ಹಿಂಜರಿಯದೆ ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬೇಕು ಎಂದರು.

ಎಎಸ್‌ಐ ವಿರುಪಾಕ್ಷಪ್ಪ, ಸುರೇಶ್, ಆಂಜನಪ್ಪ, ಮೌನೇಶ್, ಮಾರುತಿ, ಉದಯ್ ಕುಮಾರ್ ಇತರ ಪೊಲೀಸ್ ಸಿಬ್ಬಂದಿಗಳು, ಪ್ರವಾಸಿಗರು, ಶಾಲಾ ಮಕ್ಕಳು ಇದ್ದರು.


**ಹಂಪಿ ಟೈಮ್ಸ್ SSLC ಮಾರ್ಗದರ್ಶಿ**

ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..

www.hampitimes.com
epaper.hampitimes.com


# ಟೀಕೆಗೆ ಹೆದರಿ ರೈತರಿಗೆ ಅನ್ಯಾಯ ಮಾಡಲ್ಲ

## ಹೊಸ ವರ್ಷದಲ್ಲಿ ರೈತರಿಗೆ ಸಿಎಂ ರಿಂದ ಸಿಹಿ ಸುದ್ದಿ | ಹೂವಿನ ಹಡಗಲಿ ಜೊತೆ ಉತ್ತಮ ನಂಟಿದೆ


## ಕೆಎಂಎಫ್ ಅಧ್ಯಕ್ಷ ಎಸ್.ಭೀಮನಾಯ್ಕ ಹೇಳಿಕೆ | ಮೋರಗೇರಿಯಲ್ಲಿ ಬಿಎಂಸಿ ಘಟಕ ಉದ್ಘಾಟನೆ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹಾಲು ಉತ್ಪಾದಕ ರೈತರು ಸಂಕಷ್ಟಕ್ಕೆ ಸಿಎಂ ಸಿದ್ಧರಾಮಯ್ಯ ಹೊಸ ವರ್ಷದಲ್ಲಿ ಹೊಸ ಘೋಷಣೆ ಮೂಲಕ ಸಿಹಿ ಸುದ್ದಿ ನೀಡುವರು ಎಂದು ಕೆಎಂಎಫ್ ಅಧ್ಯಕ್ಷ ಎಸ್.ಭೀಮನಾಯ್ಕ ತಿಳಿಸಿದರು.


ತಾಲೂಕಿನ ಮೊರಿಗೇರಿ ಗ್ರಾಮದಲ್ಲಿ ಹಾಲು ಉತ್ಪಾದಕ ಸಹಕಾರ ಸಂಘದ ಬಿಎಂಸಿ ಘಟಕ ಉದ್ಘಾಟಿಸಿ, ಬಳಿಕ ನಡೆದ ಸಮಾರಂಭ ದಲ್ಲಿ ಭಾನುವಾರ ಮಾತನಾಡಿದರು. ಕನಿಷ್ಠ 5 ರೂ.ನಷ್ಟು ಹಾಲಿನ ಧರ ಏರಿಸುವ ಮೂಲಕ ನೇರವಾಗಿ ರೈತರಿಗೆ ತಲುಪಿಸ ಲಾಗುವುದು. ಟೀಕೆಗಳಿಗೆ ಹೆದರಿ ರೈತರಿಗೆ ಅನ್ಯಾಯ ಮಾಡುವುದಿಲ್ಲ. ಸಂಕಷ್ಟದಲ್ಲಿರು ವುದನ್ನು ಸಿಎಂ ಸಿದ್ಧರಾಮಯ್ಯ ಅವರು ಗಮನಿಸಿದ್ದಾರೆ. ಜಿಲ್ಲೆಯಲ್ಲಿ ಹೊಸ ವರ್ಷದಿಂದ ಪ್ರತಿದಿನ 300ಸಾವಿರ ಮೆಟ್ರಿಕ್ ಪಶು ಆಹಾರ ಉತ್ಪಾದಿಸುವ ಘಟಕ ಕಾರ್ಯಾರಂಭವಾಗಲಿದೆ.

**ಹೊರ ರಾಜ್ಯದಲ್ಲೂ ನಂದಿನಿ:**




ಕಳೆದ 2 ವರ್ಷಗಳಿಂದ ರಾಬಕೋವಿ ಒಕ್ಕೂಟ 7.5 ಕೋಟಿ ರೂ. ನಷ್ಟವಾಗಿದ್ದರೂ, ರೈತರ ಹಿತಾಸಕ್ತಿ ಉಳಿಸಿಕೊಳ್ಳಲಾಗಿದೆ. ದೆಹಲಿಯಲ್ಲಿ ಕಾರ್ಯಾಚರಣೆ ಪರಿಣಾಮ 15ಸಾವಿರ ಲೀ.ನಂದಿನಿ ಹಾಲು ಮಾರಾಟವಾಗುತ್ತಿದೆ. ಕೆಂಎಂಎಫ್‌ನಿಂದ ಕೋಟಿ ಲೀ.ಹಾಲು ಉತ್ಪಾದನೆ ಗುರಿ ಸಾಧಿಸಿದೆ. ಜೈಪುರ, ಗುಜರಾತ್‌ನಲ್ಲಿ ಸಂಕ್ರಾಂತಿಯಿಂದ ನಂದಿನಿ ಉತ್ಪನ್ನ ಮಾರಾಟವಾಗಲಿದೆ ಎಂದರು. ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹಳ್ಳಿ ಮಹೇಶ್ ಅಧ್ಯಕ್ಷತೆವಹಿಸಿ ಮಾತನಾಡಿದರು. ರಾಬಕೋವಿ ಒಕ್ಕೂಟದ ನಿರ್ದೇಶಕರಾದ ಎಚ್.ಮರುಳಸಿದ್ದಪ್ಪ, ಶ್ರೀಕಾಂತಪ್ಪ, ವ್ಯವಸ್ಥಾಪಕ ನಿರ್ದೇಶಕ ಹೀರಾನಾಯ್ಕ, ಸಂಘದ ಉಪಾಧ್ಯಕ್ಷ ಅಕ್ಕಿ ಅಂಜಿನಪ್ಪ, ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ, ಸದಸ್ಯರಾದ ಅಜೀಜುಲ್ಲಾ, ಪವಾಡಿ ಹನುಮಂತಪ್ಪ, ಬಾಳಪ್ಪ, ತ್ಯಾವಣಗಿ ಕೊಟ್ರೇಶ, ಮಾಜಿ ಸದಸ್ಯ ಡಿಶ್ ಮಂಜುನಾಥ ಇದ್ದರು. ಸಹಕಾರಿ ಸಂಘದ ಕೊಟ್ರಗೌಡ, ರಾಬಕೋ ಒಕ್ಕೂಟದ ಈ.ಪ್ರಕಾಶ್ ನಿರ್ವಹಿಸಿದರು.

ಹಲವರು ಹೂವಿನಹಡಗಲಿ ಕ್ಷೇತ್ರ ದಿಂದ ಸ್ಪರ್ಧಿಸುವಂತೆ ಕೋರಿದ್ದಾರೆ. ಆದರೆ, ಹಗರಿಬೊಮ್ಮನ ಹಳ್ಳಿ ಕ್ಷೇತ್ರ ನನ್ನ ಕಾರ್ಯ ಕ್ಷೇತ್ರ ವಾಗಿದೆ. ಸಹಕಾರಿ ಕ್ಷೇತ್ರದ ಮೂಲಕ ನನ್ನ ಉತ್ತಮ ಒಡನಾಟವಿದೆ. ಈ ಹಿನ್ನೆಲೆಯಲ್ಲಿ ಮುಂದೆ ಹಡಗಲಿಯಿಂದಲೇ ಸ್ಪರ್ಧಿಸುವಂತೆ ಕೋರಿಕೊಳ್ಳುತ್ತಿದ್ದಾರೆ. ಆದರೆ, ಹಗರಿಬೊಮ್ಮನಹಳ್ಳಿ ಕ್ಷೇತ್ರ ದಲ್ಲೆ ದುಡಿದಿದ್ದೇನೆ. ಅಲ್ಲಿಯೆ ಕೂಲಿ ಕೇಳುತ್ತೇನೆ. ಮಾಲವಿ ಜಲಾಶಯ, ಚಿಲವಾರು ಬಂಡೆ ಏತ ನೀರಾ ವರಿ, ಹಲವು ಏತ ನೀರಾವರಿಗಳ ಅಭಿವೃದ್ಧಿ ಮೂಲಕ ಕ್ಷೇತ್ರದಲ್ಲಿ ಈ ಹಿಂದೆಂದು ಕಾಣದಷ್ಟು ಅಭಿವೃದ್ಧಿ ಸಾಧಿಸಿದ ಹಿರಿಮೆ ಇದೆ. ಹಾಗಾಗಿ ಕಾರ್ಯಕ್ಷೇತ್ರವನ್ನೆ ಆಯ್ಕೆ ಮಾಡಿಕೊಳ್ಳುತ್ತೇನೆ.



– ಎಸ್.ಭೀಮನಾಯ್ಕ, ಕೆಎಂಎಫ್ ಅಧ್ಯಕ್ಷ

ಹಂಪಿ ಟೈಮ್ಸ್
HAMPI TIMES

## ಸ್ಟುಡೆಂಟ್ ಕಾಲಂ

### ಅಂಬಿಗ ಮತ್ತು ಪಂಡಿತ



ಒಂದು ಊರಿನಲ್ಲಿ ಶಿವ ಎಂಬ ಅಂಬಿಗ ಇದ್ದನು. ಅವನು ತನ್ನ ದೋಣಿಯನ್ನು ತೆಗೆದುಕೊಂಡು ಹೋಗಿ ಜನರನ್ನು ಒಂದು ದಡದಿಂದ ಇನ್ನೊಂದು ದಡಕ್ಕೆ ಬಿಡುತ್ತಿದ್ದನು. ನಿತ್ಯವೂ ನೂರಾರು ಜನರನ್ನು ದೋಣಿಯಲ್ಲಿ ಆ ದಡದಿಂದ ಈ ದಡಕ್ಕೆ, ಈ ದಡದಿಂದ ಆ ದಡಕ್ಕೆ ಸಾಗಿಸುತ್ತಿದ್ದ. ಹೀಗೆ ಒಂದು ದಿನ ಒಬ್ಬ ಪಂಡಿತನು ಶಿವನ ದೋಣಿಯಲ್ಲಿ ಪ್ರಯಾಣಿಸುತ್ತಿದ್ದನು. ಕೈಯಲ್ಲಿ ಒಂದಿಷ್ಟು ಗ್ರಂಥಗಳನ್ನು ಹಿಡಿದುಕೊಂಡಿದ್ದ. ಅವನು ಅಂಬಿಗನನ್ನು ಮಾತನಾಡಿಸುತ್ತಾ, 'ನಿನಗೆ ಓದು ಬರಹ ಬರುತ್ತದೆಯೇ?' ಎಂದನು. ಆಗ ಅಂಬಿಗ 'ಇಲ್ಲ' ಎಂದನು. 'ಹೋಗಲಿ ನಿನಗೆ ಉಪನ್ಯಾಸಗಳು ತಿಳಿದಿವೆಯೇ?'



ಎಂದನು. ಆಗಲೂ ಶಿವ 'ಇಲ್ಲ' ಎಂದನು. ಆಗ ಪಂಡಿತನು 'ಅಯ್ಯೋ ನೀನು ನಿನ್ನ ಜೀವನದಲ್ಲಿ ಅರ್ದ ಭಾಗವನ್ನು ವ್ಯರ್ಥವಾಗಿ ಕಳೆದುಬಿಟ್ಟೆ' ಎಂದು ಅಂಬಿಗನನ್ನು ಹೀಯಾಳಿಸಿದ.

ಅದೇ ಸಮಯಕ್ಕೆ ಸರಿಯಾಗಿ ನದಿಯಲ್ಲಿ ಭಾರಿ ಅಲೆಗಳು ಉಕ್ಕಿ ಬಂದವು. ಅಲೆಗಳ ರಭಸಕ್ಕೆ ದೋಣಿ ಹೊಯ್ದಾಡತೊಡಗಿತು. ಅಲೆಗಳ ಅಬ್ಬರ ಮತ್ತಷ್ಟು ಹೆಚ್ಚಾಯಿತು. ದೋಣಿ ಮುಳುಗುವದರಲ್ಲಿತ್ತು. ಆಗ ಶಿವನು 'ಪಂಡಿತರೇ ನಿಮಗೆ ಈಜು ಬರುವುದ?' ಎಂದನು. ಪಂಡಿತನು 'ಇಲ್ಲ' ಎಂದನು. 'ಹಾಗಾದರೆ ನಿಮ್ಮ ಜೀವನವೇ ವ್ಯರ್ಥ. ನೀವು ದೊಡ್ಡ ಪಂಡಿತರಾಗಿದ್ದು ಸಾರ್ಥಕವಾಗಲಿಲ್ಲ. ನೀವು ನಿಮ್ಮ ಜೀವ ಉಳಿಸಿಕೊಳ್ಳುವ ಕಲೆಯನ್ನು ಕಲಿತಿಲ್ಲವಲ್ಲ. ಇದುವರೆಗೂ ನೀವು ಕಲಿತಿದ್ದೆಲ್ಲ ನೀರಲ್ಲಿ ಮುಳುಗುತ್ತದೆ' ಎಂದು ಹೇಳಿದ ಶಿವ ನೀರಿಗೆ ಜಿಗದನು. ಈಜಿ ದಡ ಸೇರಿದನು. ಈಜು ಬಾರದ ಪಂಡಿತನು ನೀರಿನಲ್ಲಿ ಮುಳುಗಿ ತನ್ನ ಪ್ರಾಣ ಕಳೆದುಕೊಂಡನು.

– ಎಂ. ಅನನ್ಯ. 9ನೇ ತರಗತಿ
ಗುರುದೇವ ಪ್ರೌಢಶಾಲೆ. ಕೊಟ್ಟೂರು. ವಿಜಯನಗರ(ಜಿ)

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಮಗನು ಕಲಿತು ಕಂಪನಿಗೆ ಸೇರಿದ. ಲಕ್ಷ ಸಂಪಾದನೆಯು ಉಂಟು. ಲಗ್ನವಾದ. ಮಗನಿಗಾಗಿ ದೇಹವನ್ನು ಸವೆಸಿ ದುಡಿದ ತಂದೆ–ತಾಯಿ ಈಗ ನಿತ್ರಾಣಗೊಂಡರು. ಅವರಿಗೆ ಆಗಿನಂತೆ ದುಡಿಯುವುದಕ್ಕೆ, ನಡೆದಾಡುವುದಕ್ಕೆ ಆಗುತ್ತಿಲ್ಲ. ದಣಿದ ತಂದೆ ತಾಯಿಗೆ ವೃಕ್ಷದಂತೆ ನೆರಳಾಗಬೇಕಿದ್ದ ಮಗ–ಸೊಸೆ.......

# ನಾವೂ ವೃದ್ಧಾಶ್ರಮ ಸೇರೋಣವೇ?

## ತುತ್ತುಣಿಸಿದ ಕೈಗಳ ಆರೈಕೆ ನಮ್ಮದಾಗಲಿ

ಲೋಕದಲ್ಲಿನ ಪ್ರತಿಯೊಬ್ಬ ತಂದೆ–ತಾಯಿಯು ದುಡಿಯುವುದು ಮತ್ತು ಕನಸ್ಸು ಕಾಣುವುದು, ಸಂಪಾದಿಸುವುದು ತನ್ನ ಮಕ್ಕಳ ಶ್ರೇಯಸ್ಸಿಗಾಗಿ ಎನ್ನುವುದು ಸತ್ಯ. ತನ್ನ ಮಕ್ಕಳು ಭವಿಶ್ಯದಲ್ಲಿ ನೋಡಿಕೊಳ್ಳುತ್ತಾರೆ ಸುಖವಾಗಿ ಬದುಕು ನಡೆಸಬಹುದು ಅನ್ನುವ ಅಂತರಂಗದ ಸಂವೇದನೆಗಿಂತ ತನ್ನಂತೆ ನಮ್ಮ ಮಕ್ಕಳು ಬಾಧೆ ಪಡಬಾರದು, ಸಂಕಷ್ಟಕ್ಕೆ ಒಳಗಾಗಬಾರದು ಎನ್ನುವ ಕಳಕಳಿಯೇ ಹೊಟ್ಟೆ–ಬಟ್ಟೆಯನ್ನು ಕಟ್ಟಿ; ದೇಹದ ಕಸುವನ್ನು ಬಸಿದು, ಬೆವರು ಕಳೆದು ಕಾಲು–ಕೈಯು ಒರಟು ಕಾಣುವ ಹಾಗೆ ದುಡಿಯುವಂತೆ ಮಾಡಿದೆ. ಇಲ್ಲಿ ತನ್ನ ಸುಖ ಸಂತೋಷಕ್ಕಿಂತ ಮಕ್ಕಳ ಆದ್ಯತೆಯನ್ನೇ ಪೂರೈಸುವುದು ಪ್ರಧಾನವೆಂದು ಬಹುತೇಕ ತಂದೆ ತಾಯಿಯರು ಭಾವಿಸಿಕೊಳ್ಳುತ್ತಾರೆ ಮತ್ತು ಹಾಗೆಯೇ ನಡೆಯುತ್ತಾರೆ. ಮಕ್ಕಳನ್ನು ಸಮಾಜದಲ್ಲಿ ಆಸ್ತಿಯನ್ನಾಗಿ ಮಾಡುವುದು ಮತ್ತು ಸಮಾಜದಲ್ಲಿ ಮಕ್ಕಳಿಗೆ ಆಸ್ತಿ ಮಾಡುವ ಗುರಿಯನ್ನು ಹೊಂದಿರುವ ಪೋಷಕರು ಎಂತಹ ಸವಾಲು, ಕಠಿಣ ಸಂದರ್ಭಗಳು ಎದುರಾದರೂ ಅದನ್ನು ಮೆಟ್ಟಿ ನಿಲ್ಲುತ್ತಾರೆ. ಈ ಎಲ್ಲ ನೆಲೆಯಿಂದ ತಂದೆ–ತಾಯಿಯನ್ನು ನಮ್ಮ ನೆಲದ ಪರಂಪರೆಯು ಕಣ್ಣಿಗೆ ಕಾಣುವ ದೇವರೆಂದು ಪೂಜಿಸಿಕೊಂಡು ಬಂದಿದೆ.

ಹೆತ್ತ ಕರುಳನ್ನು ನೋವಿಸಬಾರದು ಎನ್ನುವ ಮೀಮಾಂಸೆಯು ಮಕ್ಕಳ ಮನಸ್ಸಿನಲ್ಲಿ ನಿಂತು ನಡೆಯುವ ಕಾಲ ಈಗ ಇಲ್ಲ, ಆಗ ಇತ್ತು ಆದರೆ ಅದು ಪರಿಪೂರ್ಣವಲ್ಲದ ಭಕ್ತಿ ಎನ್ನುವ ಲೋಕದೃಷ್ಟಿಯು ಮಾದರಿ ಅಷ್ಟೇ. ಶ್ರವಣ ಕುಮಾರ ವಯಸ್ಸು ತುಂಬಿದ ತನ್ನ ತಂದೆ–ತಾಯಿಯ ತೀರ್ಥಯಾತ್ರೆಯ ಆಸೆಯನ್ನು ಪೂರೈಸುವ ನೆಲೆಯಿಂದ ತಾನೇ ಅವರನ್ನು ಬುಟ್ಟಿಯಲ್ಲಿ ಜೋಳಿಗೆಯಂತೆ ತೂಗಿಸಿ ಹೆಗಲಿನಲ್ಲಿಟ್ಟಿಕೊಂಡು ನಡೆಯುತ್ತಾನೆ. ನಮಗಾಗಿ ಬದುಕು ಸವೆಸಿದ ತಂದೆತಾಯಿಯರನ್ನು ಅವರ ಇಳಿಗಾಲದಲ್ಲಿ ಮಕ್ಕಳಾದ ನಾವು ಕೈಹಿಡಿದು ನಡೆಸಬೇಕು. ದೇಹಕ್ಕೆ ವರ್ಷ ತುಂಬಿ ಹಣ್ಣಾದಂತೆ ಅವರೊಳಗಿನ ಕಸುವು ಬತ್ತಿ ರಕ್ತವು ಮಂದವಾದಂತೆ ದೇಹವು ರೋಗಕ್ಕೆ ಒಳಗಾಗುತ್ತದೆ. ದುಡಿಯುವುದಕ್ಕೆ ಒಗ್ಗುವುದಿಲ್ಲ ಆದರೆ ತನ್ನ ಬದುಕಿನ ಅನುಭವನ್ನು ಮುಂದಿನ ಪೀಳಿಗೆಗೆ ಹೇಳುವ ನೆಲೆಯಿಂದ ಅವರ ಮನಸ್ಸನ್ನು ಬಿಗುವಾಗಿಸಬೇಕು ಅನ್ನುವ ಹಂಬಲವೇ ಹಿರಿ ಜೀವವನ್ನು ಮಾತನಾಡುವಂತೆ ಮಾಡಿದೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper



ಇಳಿ ವಯಸ್ಸಿಗೆ ಬಂದಿರುವ ತಾಯಿ–ತಂದೆಯರು ಬದುಕು ಕಳೆಯುವುದಕ್ಕೆ ತನ್ನ ಮಕ್ಕಳ ಆಸರೆಯನ್ನು ಬಯಸುತ್ತಾರೆ. ಮಕ್ಕಳು ಚಿನ್ನ–ಬೆಳ್ಳಿ; ಆಸ್ತಿ–ಪಾಸ್ತಿಯನ್ನು ನೀಡಬೇಕು, ಹೊತ್ತಿನ ಕೂಳು ಭೂರಿ ಬೋಜನವೇ ಆಗಬೇಕು ಎನ್ನುವ ಯಾವ ಆಸೆಯೂ ಅವರಲ್ಲಿ ಇಣುಕುವುದಿಲ್ಲ. ಬದಲಿಗೆ ಗಂಜಿ ಇದ್ದರೂ ಸಾಕು ಮಾತಕತೆಗೆ ಮಕ್ಕಳಿದ್ದಾರೆ ಜೀವ ಬಿಟ್ಟರೆ ಬಾಯಿಗೆ ನೀರು ಬಿಡುತ್ತಾರೆ ಅಂಬೊ ನೆಮ್ಮದಿಯೇ ಅವರನ್ನು ಬಹುಕಾಲದವರೆಗೆ ಬದುಕಿಸುತ್ತದೆ. ಮನೆಯಲ್ಲಿ ಹಿರಿಯರು ಇರಬೇಕು ಎನ್ನುವ ಲೋಕದ ಮಾತು ಸುಮ್ಮನೆ ಬಂದಿಲ್ಲ. ಎಷ್ಟೇ ತ್ರಾಸಾದರೂ ಒಂದಲ್ಲ ಒಂದು ಕೆಲಸವನ್ನು ಮೈಗೆ ಹಚ್ಚಿಕೊಂಡು ಮನೆಯನ್ನು ಮಂದಿಯನ್ನು ಕರೆಯುತ್ತ ಕೂಗುತ್ತ ಬುದ್ಧಿ ಹೇಳುತ್ತ. ನಾಯಿ, ದನಕರು, ಕಸಕಡ್ಡಿ ಎಂಬುವುದೆಲ್ಲವನ್ನು ಜೋಪಾನ ಮಾಡುವ ನಮ್ಮ ಬದುಕಿಗೆ ಆದರ್ಶವನ್ನು ಕಟ್ಟುವ ಹಿರಿ ಜೀವಗಳ ಬದುಕು ಈ ನೆಲದ ಸತ್ವದೊಂದಿಗೆ ಜತನವಾಗಿದ್ದನ್ನು ಕಾಣಬಹುದು.

ಇಂದು ಆಧುನಿಕ ಪರಿಸರವನ್ನೇ ಹೊದ್ದು ಬದುಕುತ್ತಿರುವ ನಾವುಗಳು ಕೌಟುಂಬಿಕ ಮಾದರಿಯನ್ನು ಪಲ್ಲಟಿಸಿಕೊಂಡಿದ್ದೇವೆ. ನಾನು ಮಾತ್ರ ಬದುಕಬೇಕು ಇತರರು ನನ್ನ ಜೊತೆ ಬದುಕುವುದನ್ನು ಒಪ್ಪಿಕೊಳ್ಳುವುದು ಈಗ ಚೂರು ಕಷ್ಟವಾಗಿದೆ. ಖಾಸಗಿತನ ಹಾಗೂ ವ್ಯಕ್ತಿ ಸ್ವಾತಂತ್ರ್ಯವೇ ಪ್ರಧಾನವೆಂದು ಅಪ್ಪಿಕೊಂಡ ನಾವುಗಳು ತನ್ನ ಮನೆಯ ಹಿರಿಯ ಜೀವಗಳ ಮಹತ್ವವನ್ನು ಮರೆತು ಅವರನ್ನು ತನ್ನಿಂದ ದೂರ ಇಡುವುದಕ್ಕೆ ಮನಸ್ಸು ಮಾಡಿದ್ದೇವೆ. ಈ ಕಾರಣದಿಂದ ಇಂದು ನಮ್ಮ ಪರಿಸರದಲ್ಲಿ ಸರಿಸುಮಾರು 738 ವೃದ್ಧರ ಆಶ್ರಮಗಳು ಹುಟ್ಟಿಕೊಂಡು ಕಾರ್ಯನಿರ್ವಹಿಸುತ್ತಿವೆ. ನಗರದಲ್ಲಿ ಜೀವಂತವಾಗಿದ್ದ ಈ ಆಶ್ರಮಗಳು ಇಂದು ನೆಲೆ, ಸೆಲೆ, ಜೀವಕಲೆ ಎಂಬ ಹೆಸರಿನಿಂದ ಹಳ್ಳಿಯನ್ನು ಪ್ರವೇಶ ಪಡೆದು ವಿಸ್ತಾರಗೊಳ್ಳುತ್ತಿರುವುದು ಕೌಟುಂಬಿಕ ಸಂಬಂಧಗಳು ವಿನಾಶವಾಗುತ್ತಿರುವ ದಾರಿಯನ್ನು ಹೇಳುತ್ತಿವೆ.

ನನ್ನ ಒಬ್ಬ ಹಿರಿಯ ಗೆಳೆಯ ಈಗ ನಗರದ ಕಂಪೆನಿಯಲ್ಲಿ ದೊಡ್ಡ ಉದ್ಯೋಗ ಪಡೆದುಕೊಂಡು ತನ್ನ ಹೆಂಡತಿಯೊಂದಿಗೆ ಬದುಕುತ್ತಿದ್ದಾನೆ. ಅವನು ಓದುತ್ತೇನೆ ಅಂತ ಅಂದಾಗ ಅವನ ಪೋಷಕರು ಖುಷಿಯಾಗಿ ಮತ್ತಷ್ಟು ಹೆಚ್ಚು ಹೊತ್ತು ದುಡಿಯುವುದಕ್ಕೆ ನಿಂತರು. ತಾವು ಉಣ್ಣುವ ಉಡುವ ಎಲ್ಲಾ ಆಸೆಗಳನ್ನು ಕಡಿತಗೊಳಿಸಿಕೊಂಡು ಮಗನಿಗಾಗಿ ಅಂತ ಬದುಕು ನಡೆಸಿದರು. ಪದವಿ ಮುಗಿಸಿದವನು ವಿದೇಶಕ್ಕೆ ಹೋಗುತ್ತೇನೆ ಅಲ್ಲಿ ಕಲಿತರೆ ಅಧಿಕ ಸಂಬಳವನ್ನು ತರುವ ದುಡಿಮೆ ಸಿಗುವುದು ಅಂತ ಹೇಳಿದಾಗ "ಹೂಂ" ಅಂದ ಪೋಷಕರು ತನ್ನ ಹಿರಿಯರಿಂದ ಬಂದಿದ್ದ ಭೂಮಿಯನ್ನು ಈವರೆಗೆ ಸಂಪಾದಿಸಿದ ಚಿನ್ನವನ್ನು ಯಾವುದೇ ಬೇಸರವಿಲ್ಲದೇ ಮಾರಾಟ ಮಾಡಿ ಬಂದ ಹಣವನ್ನು ಮಗನ ಓದಿಗೆ ಹಾಕಿ ಬಿಟ್ಟರು. ಈಗ ಅವರಲ್ಲಿ ಮನೆಯು ನಿಂತಿದ್ದ ನೆಲ ಬಿಟ್ಟು ಬೇರೆ ಯಾವುದು ಸ್ವಂತ ಆಸ್ತಿ ಇರಲಿಲ್ಲ. ದುಡಿದು ಉಣ್ಣುವುದು ಸಾಮಾನ್ಯವಾದಂತೆ ಬದುಕಿನ ಕಷ್ಟಗಳು ಬೆನ್ನ ಹಿಂದೆ ನಿಂತು ನಡೆದವು. ಏನೇ ಆದರೂ ಅವರಲ್ಲಿ ಇದ್ದ ಭರವಸೆ ಒಂದೇ ಮಗ ಓದಿ ದೊಡ್ಡ ಸಂಬಳ ಪಡೆಯುವ ಜನ ಆಗುತ್ತಾನೆ ಆಗ ನಮ್ಮ ಕಷ್ಟ ಕಳೆಯುತ್ತದೆ ಅಂತಾನೆ. ಮಗನು ಕಲಿತು ಕಂಪನಿಗೆ ಸೇರಿದ. ಲಕ್ಷ ಸಂಪಾದನೆಯು ಉಂಟು. ಲಗ್ನವಾದ. ಮಗನಿಗಾಗಿ ದೇಹವನ್ನು ಸವೆಸಿ ದುಡಿದ ತಂದೆ–ತಾಯಿ ಈಗ ತ್ರಾಸುಗೊಂಡ ಕಾರಣ ಅವರಿಗೆ ಆಗಿನಂತೆ ದುಡಿಯುವುದಕ್ಕೆ, ನಡೆದಾಡುವುದಕ್ಕೆ ಆಗುತ್ತಿಲ್ಲ. ದೇಹ ಸತ್ವವನ್ನು ಕಳೆದಿದ್ದರಿಂದ ದಿನ ಕಳೆದಂತೆ ರೋಗಗಳು ಬಾಧಿಸುವುದಕ್ಕೆ ನಿಂತವು. ಈಗ ಮಗ–ಸೊಸೆಗೆ ತಂದೆ ತಾಯಿಗಳು ಬದುಕಿಗೆ ಕಿರಿಕಿರಿ ಅನ್ನಿಸುವುದಕ್ಕೆ ಶುರುವಾದರು. ಅವರ ಆರೈಕೆ ಮಾಡುವುದು ಯಾರಿಗೂ ಸರಿ ಬರಲಿಲ್ಲ. ಹೀಗಾಗಿ ಅವರನ್ನು ಒಂದು ವೃದ್ಧರ ಆಶ್ರಮಕ್ಕೆ ಸೇರಿಸಿ ತಿಂಗಳಿಗೆ ಹಣವನ್ನು ಕಟ್ಟಿ, ವರ್ಷದಲ್ಲಿ ಮೂರು ಸಾರಿ ನೆನಪಾದಾಗ ಹೋಗಿ ನೋಡಿ ಬರುತ್ತಾರೆ. ಅದು ಶಾಸ್ತ್ರಕ್ಕೆ ಅಷ್ಟೇ.

ವಿದ್ಯಾವಂತರು, ಹಣವಂತರು ತಮ್ಮ ತಂದೆ ತಾಯಿಯನ್ನು ವಸ್ತು ರೂಪದಲ್ಲಿ ನೋಡುವ ಹಾಗೂ ಇಳಿ ವಯಸ್ಸಿ ಜೀವಗಳು ಖಾಸಗಿ ಬದುಕಿಗೆ ಧಕ್ಕೆ ತರುತ್ತಾರೆ ಅನ್ನುವ ಚಿಂತನೆಯನ್ನು ಒಪ್ಪಿಕೊಂಡಿರುವ, ಲಗ್ನವಾಗುವ ಬಹುತೇಕ ಹೆಣ್ಣು ಮಕ್ಕಳು ತಮ್ಮ ಜೊತೆಗೆ ಹಿರಿಯ ಜೀವಗಳು ಬೇಡ ಅವರ ಆರೈಕೆ ಮಾಡುವುದು ಮತ್ತು ಕಿರಿಕಿರಿಯನ್ನು ಸಹಿಸುವುದಕ್ಕೆ ಸಾದ್ಯವಿಲ್ಲ ಎನ್ನುವ ಕೌಟುಂಬಿಕ ಧೋರಣೆಗಳು ವೃದ್ಧರ ಆಶ್ರಮದ ಆದ್ಯತೆಯನ್ನು ಹೆಚ್ಚಿಸಿದೆ ಮತ್ತು ತಂದೆ ತಾಯಿಗಳನ್ನು ಸಂವೇದನೆಯೇ ಇಲ್ಲದಂತೆ ಎಲ್ಲಿಯೋ ಇಟ್ಟು ಬದುಕುವಂತೆ ಮಾಡುವ ಕೆಟ್ಟ ಚಾಳಿ ನಮ್ಮ ಬದುಕಿನ ಮೌಲ್ಯವನ್ನೇ ಹುಸಿಯಾಗಿಸಿದೆ ಎನ್ನುವ ಅರಿವು ನಮ್ಮೊಳಗೆ ಘನವಾಗಬೇಕು. ನಮ್ಮನ್ನು ಹುಟ್ಟಿಸಿ ಬೆಳೆಸಿದ ಜೀವಗಳು ನಮ್ಮ ಜೊತೆಯಲ್ಲಿಯೇ ಬದುಕು ಕಾಣಬೇಕು ಅನ್ನುವ ಪ್ರಜ್ಞೆ ನಮ್ಮದಾಗಬೇಕು ಆಗ ಮನುಷ್ಯನ ಬದುಕಿಗೆ ಅರ್ಥವಂತಿಕೆ ಸಿಗುತ್ತದೆ.

# ಪೈಲ್ವಾನ್ ಮಿಲ್ಟ್ರಿ ಆನಂದ್

ಜೈ ಜವಾನ್.. ಜೈ ಕಿಸಾನ್... ಸದ್ಯ ಭಾರತೀಯ ಸೇನೆಯಲ್ಲಿ ಹವಾಲ್ದಾರರಾಗಿ ಸೇವೆ ಸಲ್ಲಿಸುತ್ತಿದ್ದು 2025 ಜೂನ್ ತಿಂಗಳಲ್ಲಿ ಸೇವೆಯಿಂದ ನಿವೃತ್ತಿಗೊಳ್ಳುತ್ತಿದ್ದು,ತರುವಾಯ ರೈತನಾಗಿ ಭೂಮಿ ತಾಯಿಯ ಸೇವೆ ಮಾಡಬೇಕೆಂಬ ಆಸೆ ಹೊಂದಿರುತ್ತಾರೆ.

ಕುಸ್ತಿ ಅಖಾಡದಲ್ಲಿ ಇವರಿಂದ ಪರಾಭವಗೊಂಡ ಕುಸ್ತಿಪಟುಗಳಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯಪ್ರಶಸ್ತಿ ದೊರಕಿದೆ ಭಾರತ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ಕುಸ್ತಿ ಕ್ರೀಡೆಯಲ್ಲಿ ಸಾಕಷ್ಟು ಸಾಧನೆ ಮಾಡಿರುವ ಇವರನ್ನು ಗುರುತಿಸದೆ ಇರುವುದು ಇವರಿಗೆ ಬೇಸರವಾದರೂ ಪ್ರಶಸ್ತಿ ದೊರಕಿರುವುದು ನಮ್ಮ ಹಿರಿಯ ಹಾಗೂ ಕುಸ್ತಿ ಸ್ನೇಹಿತರಿಗೆ ಅಲ್ಲವೇ? ಎಂಬ ಸಂತೋಷ ಇವರಲ್ಲಿದೆ.

ಧಾರವಾಡದ ಪೈಲ್ವಾನ್ ಆನಂದ್ ಎಂದರೆ ಬೇರೆ ರಾಜ್ಯದ ಕುಸ್ತಿಪಟುಗಳು ಅಖಾಡದಲ್ಲಿ ಕೈಮಿಲಾಯಿಸಲು ಯೋಚಿಸುತ್ತಿದ್ದ ಕಾಲ 2007 ರಿಂದ 2018 ಮಹಾರಾಷ್ಟ್ರದ ಹೆಸರಾಂತ ಕುಸ್ತಿಪಟು ಸಿಕಂದರ್ ಶೇಖ್ ಇವರನ್ನು 10–0 ಅಂಕಗಳಲ್ಲಿ 2015ರಲ್ಲಿ ಆರ್ಮಿ ಟ್ರಯಲ್ಸ್ ನಲ್ಲಿ ಸೋಲಿಸಿದ್ದು ಇವರಿಗೆ ಅಚ್ಚಳಿಯದ ನೆನಪು.

ಸರಿ ಸುಮಾರು ದೇಶ ಸೇವಕನಾಗಿ 20 ವರ್ಷ ಸೇವೆ ಸಲ್ಲಿಸಿದ್ದು ತಂದೆ ಶಂಕರಗೌಡ ಇವರ ಮುಗ್ಧ ಮನಸ್ಸು,ತಾಯಿ ಪಾರ್ವತಿ ಇವರ ಲಾಲನೆ ಪಾಲನೆ ನನಗೆ ಸಾಕಷ್ಟು ಸ್ಫೂರ್ತಿ, ಕೆಚ್ಚೆದೆಯ ಹೋರಾಟಕ್ಕೆ ಧೈರ್ಯ ನೀಡಿದೆ,ಇಂದಿಗೂ ಕುಟುಂಬದವರ ಸಹಕಾರವೇ ನನಗೆ ಶ್ರೀರಕ್ಷೆ ಕಗ್ಗಲಿನಂತಿದ್ದ ನನ್ನನ್ನು ಕೆತ್ತಿ ಮೂರ್ತಿಯನ್ನಾಗಿಸಿದ ಶ್ರೇಯ ರಾಜ್ಯದ ಹೆಸರಾಂತ ತರಬೇತುದಾರರಾದ ಶ್ರೀ ಶ್ರೀನಿವಾಸಗೌಡ ಮೈಸೂರು ಹಾಗೂ ಶ್ರೀ ಶಿವಾನಂದ್ ದಾವಣಗೆರೆ ಇವರಿಗೆ ಸಲ್ಲುತ್ತದೆ ಎಂದು ಸರ್ವರನ್ನು ನೆನೆಯುತ್ತಾರೆ ಆನಂದ್.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಕುಸ್ತಿ ಪಟುಗಳ ತವರೂರು ಧಾರವಾಡದಲ್ಲಿ ಗರಡಿ ಮನೆಯನ್ನು ತೆರೆದು ಕುಸ್ತಿಯ ಏಳಿಗೆಗಾಗಿ ಶ್ರಮಿಸಬೇಕೆಂಬುದು ಇವರ ಮಹದಾಸೆ ಕರ್ನಾಟಕದ ಕುಸ್ತಿ ಪೋಷಕರು ಹಾಗೂ ಅಂತರಾಷ್ಟ್ರೀಯ ಕುಸ್ತಿಪಟುವಾದ ಶ್ರೀಯುತ ರತನ್ ಕುಮಾರ್ ಮಠಪತಿ ಇವರಿಂದ ಆರ್ಥಿಕ ಸಹಾಯವನ್ನು ಈಗಾಗಲೇ ಪಡೆದಿದ್ದು ಕುಸ್ತಿ ಜೀರ್ಣೋದ್ಧಾರದ ಕಡೆಗೆ ಇವರಿಗೆ ಒಲವು ಹೆಚ್ಚಾಗಿದೆ.

ಚಿಕ್ಕಪ್ಪ ಗಂಗನಗೌಡ ಇವರು ಅತ್ಯುತ್ತಮ ಕುಸ್ತಿಪಟುವಾಗಿದ್ದು ಇವರ ಪ್ರೇರಣೆ ನನ್ನನ್ನು ಕುಸ್ತಿಪಟುವನ್ನಾಗಿಸಿತ್ತು ಎಂದು ಹೇಳುತ್ತಾರೆ ಸೇನಾ ಸಾಧಕ ಆನಂದ್. ಧಾರವಾಡದ ಮಾದನ ಬಾವಿಯ ಶಂಕರಗೌಡ ಮತ್ತು ಪಾರ್ವತಿಯರ ಆರು ಮಕ್ಕಳಲ್ಲಿ ಕೊನೆಯವ ಆನಂದ ಶಂಕರಗೌಡ ಹೊಳೆ ಹಡಗಲಿ.

1–7ನೇ ತರಗತಿವರೆಗೆ ಮಾದನಬಾವಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ 8–12 ವರೆಗೆ ಜಿ,ಜೆ,ಸಿ. ದಾವಣಗೆರೆ ಇಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ ದಾವಣಗೆರೆ ಕುಸ್ತಿ ಕ್ರೀಡಾ ನಿಲಯದಲ್ಲಿ ತರಬೇತಿ ಪಡೆದಿರುತ್ತಾರೆ.

ದೊಡ್ಡಪ್ಪನ ಮಗ ರುದ್ರೇಗೌಡ ಇವರು ಶಾಲಾ ಕುಸ್ತಿ ಪಂದ್ಯಾವಳಿಗೆ ಕರೆದುಕೊಂಡು ಹೋಗುತ್ತಾರೆ ಆಗ 38 ಕೆಜಿ ದೇಹ ತೂಕ ವಿಭಾಗದಲ್ಲಿ ರಾಜ್ಯ ಕುಸ್ತಿ ಕ್ರೀಡೆಗೆ ಆಯ್ಕೆಯಾಗಿ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆಯುತ್ತಾರೆ ತದನಂತರ 2001ರಲ್ಲಿ ದಾವಣಗೆರೆಯ ಕುಸ್ತಿ ಕ್ರೀಡಾ ವಸತಿ ನಿಲಯಕ್ಕೆ ಆಯ್ಕೆಗೊಂಡು ಪೂರ್ಣ ತರಬೇತಿ ಪಡೆಯಲು ಆರಂಭಿಸುತ್ತಾರೆ. ಅಂದು ಕ್ರೀಡಾ ನಿಲಯದಲ್ಲಿ ತರಬೇತು ಪಡೆಯುತ್ತಿದ್ದ ಹಿರಿಯ ಕುಸ್ತಿಪಟುಗಳಾದ ಜಿ.ನಾಗರಾಜ್ ಉಪೇಂದ್ರ ಕಾರ್ತಿಕ್, ನ್ಯಾಮಗೌಡ ಮತ್ತಿತರರ ಮಾರ್ಗದರ್ಶನ ಹಾಗೂ ಸಹಕಾರ ನನ್ನನ್ನು ಅವರಂತೆ ಆಗಲು ಹುರಿದುಂಬಿಸಿತು ಎಂದೇಳುತ್ತಾರೆ ಆನಂದ್. ರಾಷ್ಟ್ರದ ಮಣ್ಣು ಕುಸ್ತಿಯಲ್ಲಿ (ಭಾರತೀಯ ಶೈಲಿ) ಹೆಸರಾಂತ ಕುಸ್ತಿಪಟುಗಳಾದ ಯೋಗೀಶ್ ಹೊಂಬಾಳೆ, ಸಂತೋಷ್ ದರೋಡ, ಶಿವಾಜಿ ಪಾಟೀಲ್ ಮತ್ತಿತರರನ್ನು ಅಖಾಡದಲ್ಲಿ ಮಣ್ಣು ಮುಕ್ಕಿಸಿರುತ್ತಾರೆ ಆನಂದ್.

ಕರ್ನಾಟಕ ರಾಜ್ಯದ ಬೆಳಗಾವಿಯಲ್ಲಿ ನಡೆಯುವ ಚಿತ್ತೂರು ಕೇಸರಿ ಪ್ರಶಸ್ತಿಯನ್ನು 05 ಬಾರಿ (2006,2008,2009,2010,2012), ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುವ ಕರ್ನಾಟಕ ಕೇಸರಿ ಪ್ರಶಸ್ತಿಯನ್ನು 03 ಬಾರಿ (2012,2009,2015),02 ಬಾರಿ ಮೈಸೂರು ದಸರಾ ಕಂಠೀರವ(2007,2013), 2014 ಬೀರೂರು ಇಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರಶಸ್ತಿಯನ್ನು ಗಳಿಸಿದ್ದು, ಈವರೆಗೆ ಒಟ್ಟು 26 ಬೆಳ್ಳಿಗದೆಗಳನ್ನು ಗೆದ್ದಿರುತ್ತಾರೆ ಇದಲ್ಲದೆ ಮಹಾರಾಷ್ಟ್ರದ ವಾರಣಕೇಸರಿ ಪ್ರಶಸ್ತಿಯನ್ನು ಪಡೆದಿರುತ್ತಾರೆ ಇದರ ಜೊತೆಗೆ ಇನ್ನೂ ಹತ್ತು ಹಲವಾರು ಪ್ರಶಸ್ತಿ ಪಡೆದಿರುತ್ತಾರೆ.

ವಿಶೇಷವೆಂದರೆ 2013ರ ಮೈಸೂರು ದಸರಾ ಕಂಠೀರವ ಪ್ರಶಸ್ತಿಗೆ ನೀಡಿದ ಬೆಳ್ಳಿ ಗದೆಯನ್ನು ನಾಡ ದೇವತೆ ಮೈಸೂರಿನ ಚಾಮುಂಡೇಶ್ವರಿ ಅಮ್ಮನವರಿಗೆ ಭಕ್ತಿ ಪೂರ್ವಕವಾಗಿ ಸಮರ್ಥಿಸಿ ಮೈಸೂರು ಕುಸ್ತಿ ಪ್ರೇಮಿಗಳ ಹಾಗೂ ಚಾಮುಂಡೇಶ್ವರಿ ತಾಯಿಯ ಮೇಲಿನ ಭಕ್ತಿ ಹಾಗೂ ಪ್ರೀತಿಯನ್ನು ಮೆರೆದಿರುತ್ತಾರೆ.

ಶಿಕ್ಷೆ, ಶಿಸ್ತು, ಬುದ್ಧಿ ನೀಡಿದ ನನ್ನ ಕುಸ್ತಿ ಗುರುಗಳು ಈವರೆಗೆ ನನ್ನನ್ನು ಬೆಳೆಸಿದ್ದಾರೆ ಅವರ ಋಣ ತೀರಿಸಲು ನನ್ನಿಂದ ಸಾಧ್ಯವಿಲ್ಲ, ತಂದೆ, ತಾಯಿ, ಅಣ್ಣ ನಿಂಗನಗೌಡ, ಮಡದಿ ನಂದೇಶ್ವರಿ ಪುತ್ರ ಆದರ್ಶ ಗೌಡ,ಪುತ್ರಿ ಅರ್ಪಿತ ಇವರ ಪ್ರೀತಿ ಕುಸ್ತಿ ಜಯಿಸಲು ಹಾಗೂ ಕರ್ತವ್ಯ ನಿರ್ವಹಿಸಲು ಶಕ್ತಿ ನೀಡಿದೆ. ದೇಶ ಸೇವೆಯೇ ಈಶ ಸೇವೆ ಎಂದು ಭಾರತಮಾತೆಯ ಸೇವೆ ಸಲ್ಲಿಸಿರುವ ತಮಗೆ ಒಳಿತಾಗಲಿ ಮುಂದಿನ ನಿವೃತ್ತಿ ಜೀವನದಲ್ಲಿ ನಿಮ್ಮಿಂದ ಕಲಿತ ಕ್ರೀಡಾಪಟುಗಳು ರಾಷ್ಟ್ರಕ್ಕೆ ಕೀರ್ತಿ ತರಲಿ ಹಾಗೂ ನಿಮ್ಮ ಸಾಧನೆಗಳನ್ನು ಸರ್ಕಾರ ಗುರುತಿಸಿ ಗೌರವಿಸಲಿ ಎಂದು ಹಾರೈಸೋಣ.

### ಕ್ರೀಡಾ ಸಾಧನೆಗಳು

2007(ಜಲಂಧರ್) ರಾಷ್ಟ್ರೀಯ ಸೀನಿಯರ್ ನ್ಯಾಷನಲ್ ಕುಸ್ತಿ ಪಂದ್ಯಾವಳಿಯಲ್ಲಿ 84 ಕೆಜಿ ದೇಹ ತೂಕದ ಗ್ರೀಕೋ ರೋಮನ್ ಶೈಲಿ 04 ನೇ ಸ್ಥಾನ.

2008(ದೆಹಲಿ)ಸೀನಿಯರ್ ನ್ಯಾಷನಲ್ ಕುಸ್ತಿ ಪಂದ್ಯಾವಳಿಯ 96 ಕೆಜಿ ದೇಹ ತೂಕದ ಫ್ರೀ ಸ್ಟೈಲ್ ವಿಭಾಗದಲ್ಲಿ 04 ನೇ ಸ್ಥಾನ.

ಆರ್ಮಿ ಸ್ಪೋರ್ಟ್ಸ್ ನಲ್ಲಿ 2007 ( ಬೆಳಗಾಂ)84 ಕೆಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಚಿನ್ನ,ನಾಸಿಕ್ ನಲ್ಲಿ ನಡೆದ ಪಂದ್ಯಾವಳಿಯ 84 ಕೆಜಿ ವಿಭಾಗದ ಫ್ರೀ ಸ್ಟೈಲ್ ನಲ್ಲಿ ಚಿನ್ನದ. ಇಂಟರ್ ಕಮಾಂಡ್ ಕಾಂಪಿಟೇಶನ್‌ನಲ್ಲಿ 84 ಕೆಜಿ ವಿಭಾಗದಲ್ಲಿ ಚಿನ್ನ,ಇಂಡಿಯನ್ ಆರ್ಮಿ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಇದೇ ತರಹದ ಕ್ರೀಡಾ ಸಾಮರ್ಥ್ಯವನ್ನು 2011ರವರೆಗೆ ಪ್ರದರ್ಶಿಸಿ ಪದಕಗಳಿಸಿರುತ್ತಾರೆ.



2011ರಲ್ಲಿ 96 ಕೆಜಿ ದೇಹ ತೂಕ ವಿಭಾಗದಲ್ಲಿ ಏರಿಯಾ ಕಾಂಪಿಟೇಶನ್ ನಲ್ಲಿ ಪ್ರಥಮ ಸ್ಥಾನ, ಕಮಾಂಡ್ ಕಾಂಪಿಟೇಶನ್ ನಲ್ಲಿ ಪ್ರಥಮ ಸ್ಥಾನ, ಸದ್ರನ್ ಕಮಾಂಡ್ ಕಾಂಪಿಟೇಶನ್ ನಲ್ಲಿ ಪ್ರಥಮ ಸ್ಥಾನ, ಆರ್ಮಿ ಕಾಂಪಿಟೇಶನ್ ನಲ್ಲಿ ಪ್ರಥಮ ಹಾಗೂ ಸರ್ವಿಸ್ ಕಾಂಪಿಟೇಶನ್ ನಲ್ಲಿ ತೃತಿಯ ಸ್ಥಾನ ಪಡೆದಿರುತ್ತಾರೆ.

2012 ಮೈಸೂರಿನಲ್ಲಿ ನಡೆದ ಆಲ್ ಇಂಡಿಯಾ ಇಂಟರ್ ಸೀನಿಯರ್ ನ್ಯಾಷನಲ್ ಕ್ರೀಡಾಕೂಟದಲ್ಲಿ 96 ಕೆಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

2013 ಲಿಗಮೆಂಟ್ ಶಸ್ತ್ರಚಿಕಿತ್ಸೆಯ ನಂತರ ಆರು ತಿಂಗಳು ವಿಶ್ರಾಂತಿ ಪಡೆದ ತರುವಾಯ ಕ್ರೀಡೆಗೆ ಮರಳಿ 2014ರಲ್ಲಿ ಸರ್ವಿಸಸ್ ಕ್ರೀಡೆಯಲ್ಲಿ ಬೆಳ್ಳಿ ಪದಕವನ್ನು ಪಡೆದಿರುತ್ತಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ರೈತ

ನೇಗಿಲ ಹಿಡಿದ ಯೋಗಿ
ಹೊಲದಲ್ಲಿ ದುಡಿವ ತಲೆಬಾಗಿ
ಶ್ರಮದ ದಾರಿಯಲಿ ಸಾಗಿ
ಬೆಳೆವನು ಭತ್ತ ಜೋಳ ರಾಗಿ

ಪ್ರಕೃತಿ ಮಾತೆಯ ಬೇಡಿ
ಕಳೆ ಕೀಟದ ಜೊತೆ ಬಡಿದಾಡಿ
ರಾತ್ರಿಯ ನಿದ್ದೆಯ ದೂಡಿ
ಬೆಳೆಯನು ಜೋಪಾನ ಮಾಡಿ

ದೇಶದ ಬೆನ್ನೆಲುಬು ರೈತ
ಎಲ್ಲರ ಪಾಲಿನ ಅನ್ನದಾತ
ಬೆವರನು ಹರಿಸುವ ಅನವರತ
ಕಾಯುವ ನಾವು ರೈತರ ಹಿತ

– ಚೇತನ ಭಾರ್ಗವ, ಬೆಂಗಳೂರು

### ರೈತರ ದಿನ.

ನೇಗಿಲ ಯೋಗಿ, ನಮ್ಮ ಈ ರೈತ
ಪರರ ಹಿತಕ್ಕಾಗಿ ದುಡಿಯುವವನು ಈತ
ನಿಸ್ವಾರ್ಥವಾಗಿ ಅನ್ನವನ್ನು ಹಂಚುವ ಪಿತಾ
ಸಾಲದ ಹೊರೆಯಲ್ಲಿ ನಲುಗಿದ ಆತ.

ಪ್ರಕೃತಿಯ ಕಣ್ಣಾಮುಚ್ಚಾಲೆ ಆಟಕ್ಕೆ
ನೆಮ್ಮದಿಯ ಬದುಕಿಗೆ ಉಂಟಾಯಿತು ಧಕ್ಕೆ.
ಆದರೂ, ನೇಗಿಲಿಗೆ ಕೊಡುವ ಅಪ್ಪುಗೆ
ಮತ್ತೆ ಬೆವರು ಸುರಿಸುವ ಈ ಧರೆಗೆ.

ರೈತಾಪಿ ಜನರ ಋಣವ ತೀರಿಸಲು
ಸಾಧ್ಯವೇ? ನಿಮ್ಮ ಒಳಿತಿಗೆ ದೇವರಲ್ಲಿ
ಪ್ರಾರ್ಥಿಸುತ್ತೇವೆ.

– ಮಂಜುಶ್ರೀ ಮುರಳೀಧರ್.

### ರೈತ

ಮಳೆ ಬರಲು ರೈತನ ಮೊಗದಲ್ಲಿ
ಸಂತಸದ ಕಳೆ
ಇಳೆಯ ತುಂಬಾ ಬೆಳೆದ ಹಸಿರ ಬೆಳೆ
ಹೊಲದಿ ದುಡಿವ ಅನುದಿನವು
ಕಷ್ಟ ಪಡುವ ಪ್ರತಿ ಕ್ಷಣವು

ಬೆಳೆಗೆ ತಕ್ಕ ಬೆಲೆ ಇಲ್ಲ
ತನ್ನ ಕಾಯಕ ಮರೆಯೊಲ್ಲ
ನಿತ್ಯ ಹಲವರಿಗೆ ಅನ್ನ ನೀಡುವ
ದುಡಿದು ಬೆವರ ಸುರಿಸುವ.

– ಸುವರ್ಣಾ ಭಟ್ಟ.

ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು ಇರಲಿ ಮನೆಗೊಂದು ದಿನಪತ್ರಿಕೆ

ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
9902909399, 9980559681
9740742251, 8073589125

# ನಾನೊಬ್ಬ ರೈತ



ಮಾಸಿದ ಬಟ್ಟೆ, ಎಣ್ಣೆಕಾಣದ ತಲೆ, ಬಸವಳಿದ ಮುಖ ಇಷ್ಟು ಸಾಕೇ ನನ್ನ ಪರಿಚಯಕ್ಕೆ ??
ಹೌದು ನಾನೊಬ್ಬ ರೈತ. ಒಕ್ಕಲುತನ ನನ್ನ ಉಸಿರು. ಜೋಡೆತ್ತುಗಳು ನನ್ನ ಒಡನಾಡಿಗಳು, ಹಗಲಿರುಳು ನನ್ನೊಂದಿಗೆ ದುಡಿವ ಜೀವಿಗಳು. ಹೊಲವೆ ನನ್ನ ಆಡುಂಬೊಲ. ನನ್ನವರ ಪಾಲಿಗೆ ಭೂಮಿ ಹರಿಯದ ಹಚ್ಚಡ. ನಿರಂತರ ಅನ್ನದಾನ ಮಾಡುವ ಕರುಣಾಮಯಿ. ಈಕೆಯ ಮಡಿಲಲ್ಲಿ ನಾವು ಶಾಂತಿ, ಸಮಾಧಾನ ಅರಸುವ ಮಕ್ಕಳು. ಮಣ್ಣು, ನೀರು, ಗಾಳಿಯ ಸತತ ಸಾಂಗತ್ಯ ನಮ್ಮದು. ಬಿಸಿಲಿನ ತಾಪಕ್ಕೆ, ಬೀಸುವ ಗಾಳಿಗೆ, ಮೂಳೆ ಕೊರೆಯುವ ಚಳಿಗೆ, ಸತತ ಕೆಲಸಕ್ಕೆ ಈಡಾಗುವ ನನಗೆ ಮಧ್ಯವಯಸ್ಸಿನಲ್ಲೆ ಮುಪ್ಪು ಬರುವುದು ಅನಿವಾರ್ಯ.

ಬಿತ್ತನೆ ಬೀಜ ಗೊಬ್ಬರಗಳ ಅಭಾವ, ಬಾರದ ಮಳೆ, ಕೈಕೊಟ್ಟ ಬೆಳೆ, ಬೆಳೆದು ನಿಂತ ಮಕ್ಕಳು, ಅವರನ್ನು ಕಾಡುವ ಪೌಷ್ಟಿಕತೆಯ ಕೊರತೆ, ನೋವು ನನ್ನನ್ನು ನಿರಂತರವಾಗಿ ಕಾಡುವ ಶತ್ರುಗಳು. ಸಮಕಾಲೀನ ಪರಿಸ್ಥಿತಿಯಲ್ಲಿ ಅತ್ಯಂತ ದೈನೇಸಿ ಸ್ಥಿತಿ ನಮ್ಮದು. ಇದರೊಂದಿಗೆ ಸರ್ಕಾರ ಇತ್ತೀಚೆಗೆ ತರುತ್ತಿರುವ ಎಸ್‌ಇಝಡ್ ಎಂಬ ವಿಶೇಷ ಆರ್ಥಿಕ ಯೋಜನೆಯಡಿ ಭೂಮಿ ವಶಪಡಿಸಿ ಕೊಳ್ಳುವ ಯೋಜನೆಗಳ ಭಯ ಎಲ್ಲಿ ನಮ್ಮ ಭೂಮಿಯು ಈ ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗಿ ನಾವು ಭೂರಹಿತರಾಗುವೆವೋ ಎಂಬ ಹೆದರಿಕೆ ನಿರಂತರವಾಗಿ ಕಾಡುವ ಸಮಸ್ಯೆ. ಸಮಸ್ಯೆ, ಆರ್ಥಿಕ ಹಿಂಜರಿತಗಳಿಂದ ನಾನೆಂದೂ ವಿಮುಖನಾಗಿಲ್ಲ. ಬಾರದ ಮಳೆಯಿಂದ ಕಂಗೆಟ್ಟರೂ ನಿರಂತರ ಆಶಾವಾದಿ ನಾನು. ಆಳುಗಳ ಕೊರತೆ, ಮಳೆಯ ಕಣ್ಣುಮುಚ್ಚಾಲೆ, ಗೊಬ್ಬರ, ಬೀಜಗಳ ಅಸಮರ್ಪಕ ಪೂರೈಕೆಯಿಂದಾಗಿ ಕಡಿಮೆ ಬೆಳೆ ಬರುವುದು, ಬಂದಷ್ಟು ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ನನಗೆ ಸರ್ವೇ ಸಾಮಾನ್ಯ.

ಆದರೂ ನಾನು ಸೋತು ಕೈ ಚೆಲ್ಲುವವನಲ್ಲ, ಪ್ರಕೃತಿಯ ಮುನಿಸಿಗೆ ತುತ್ತಾಗಿದ್ದರೂ ಭೂತಾಯಿಯ ಮೇಲಿನ ನಂಬಿಕೆ ಕಳೆದುಕೊಂಡಿಲ್ಲ.ಅಮ್ಮನ ಕೈಯಿಂದ ಹೊಡೆಸಿಕೊಂಡ ಪುಟ್ಟ ಮಗು ಅಮ್ಮನ ಕಾಲಿಗೇ ಜೋತುಬೀಳುವಂತೆ ಭೂಮಿ ತಾಯಿಯ ಮೇಲಿನ ಪ್ರೀತಿ ಅಳಿಸಿಲ್ಲ. ಸಂಕಷ್ಟಗಳಿಂದ ಜರ್ಜರಿತನಾಗಿದ್ದರೂ, ಬವಣೆಯೇ ಬದುಕಾಗಿದ್ದರೂ ಭೂಮಿತಾಯಿಯ ಸೇವೆಯಲ್ಲಿ ಎಲ್ಲವನ್ನೂ ಮರೆತು ಸಾರ್ಥಕತೆಯ ಭಾವ ಹೊಂದುತ್ತೇನೆ. ಎಲ್ಲರೂ ಏನನ್ನಾದರೂ ಕೊಟ್ಟು ಕಳೆದುಕೊಂಡ ಭಾವ ಅನುಭವಿಸುತ್ತಾರೆ ಆದರೆ ನಾವು ರೈತರು ಎಲ್ಲರಿಗೂ ಹಂಚಿ ಖುಷಿಯನ್ನು ಅನುಭವಿಸುತ್ತೇವೆ.

ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಹದಿಹರೆಯದ ಮಕ್ಕಳು ರಿಸೆಷನ್ ಎಂಬ ಹೆಸರಿನಲ್ಲಿ ಕೆಲಸ ಕಳೆದುಕೊಂಡಾಗ ಪಿಂಕ್ ಸ್ಲಿಪ್ ಗಳನ್ನು ಪಡೆದಾಗ ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಂಡರು. ಆದರೆ ನಮ್ಮ ಬದುಕು ನೋಡಿ... ನಾವು ರೈತರು ನಮಗೆ ಜೀವನವೇ ಒಂದು ಲಾಟರಿಯಂತೆ. ಭೂಮಿ ನಮ್ಮದಲ್ಲವಾದಾಗ್ಯೂ ಕೂಡ ಅದನ್ನು ಜತನವಾಗಿ ಕಾಯ್ದುಕೊಳ್ಳುತ್ತೇವೆ. ಸಮವಾಗಿ ರಂಟೆ ಕುಂಟೆ ಉಪಯೋಗಿಸಿ ಹದನಾಗಿಸಿಕೊಳ್ಳುತ್ತೇವೆ. ಉತ್ತುತ್ತೇವೆ ಬಿತ್ತುತ್ತೇವೆ ಮಳೆಗಾಗಿ ಚಾತಕ ಪಕ್ಷಿಯಂತೆಕಾಯುತ್ತೇವೆ.ಮಳೆ ಕೈ ಕೊಟ್ಟರೆ ನೀರಿನ ಆಶ್ರಯ ತಾಣಗಳ ಮೂಲಕ ಪಂಪ್ಸೆಟ್ ನೆರವಿನಿಂದ ಹೊಲಗಳಿಗೆ ನೀರು ಹಾಯಿಸುತ್ತೇವೆ. ಇಲ್ಲೂ ಕೂಡ ವಿದ್ಯುತ್ ಕಣ್ಣು ಮುಚ್ಚಾಲೆ ಆಡುತ್ತಾ ಕೈ ಕೊಟ್ಟರೆ ನಮ್ಮ ಪರಿಸ್ಥಿತಿ ದೇವರಿಗೇ ಪ್ರೀತಿ. ಕರೆಂಟು ಬಂದಾಗ ಅದು ಹಗಲಿರಲಿ, ಸರಹೊತ್ತಿರಲಿ ಹೊಲಕ್ಕೆ ಹೋಗಿ ನೀರು ಹಾಯಿಸಲೇಬೇಕು ಇಲ್ಲದಿದ್ದರೆ ಬೆಳೆ ಒಣಗುತ್ತದೆ. ಇಷ್ಟಕ್ಕೆ ಮುಗಿಯೋದಿಲ್ಲ ನಮ್ಮ ಫಜೀತಿ. ಬೆಳೆ ಕೈಗೆ ಬರುವ ಹೊತ್ತಿಗೆ ಹಕ್ಕಿಗಳ ಕಾಟ ಅವುಗಳನ್ನು ಓಡಿಸಲು ಮತ್ತೆ ಕವಣೆ ಹಿಡಿದು, ಗಂಟಲು ಹರಿಯುವಂತೆ ಕೂಗುತ್ತಾ ಇಲ್ಲವೇ ತಮಟೆ ಬಾರಿಸುತ್ತಾ ಹೊಲವನ್ನು ಹಗಲಿನಲ್ಲಿಯೂ, ರಾತ್ರಿಯಲ್ಲಿ ಪ್ರಾಣಿಗಳಿಂದ ಕಾಯಬೇಕು. ಈ ಸಮಯದಲ್ಲಿ ಬೆಳೆಗಳ ಮಧ್ಯದಲ್ಲಿ ಬರುವ ಕಳೆಯನ್ನು ಕೂಡ ಕೀಳಲು ಆಳುಗಳಿಗೆ ಹೊಂಚಬೇಕು. ಇಲ್ಲವೇ ನಾವೇ ಮನೆ ಮಂದಿಯ ಸಹಾಯದಿಂದ ಕಳೆ ಕೀಳಬೇಕು, ಗೊಬ್ಬರ ಹಾಕಬೇಕು, ಕ್ರಿಮಿಕೀಟಗಳಾಗದಂತೆ ಕ್ರಿಮಿನಾಶಕ ಸಿಂಪಡಿಸಬೇಕು. ಅಂತಿಮವಾಗಿ ಫಸಲು ಕೊಯ್ಯುವ ಸಮಯದಲ್ಲಿ ಮತ್ತೊಮ್ಮೆ ಆಳಿಗಾಗಿ ಹುಡುಕಾಟ, ಅವರ ಮರ್ಜಿ ಕಾಯ್ದು ಆಳುಗಳನ್ನು ಕರೆ ತಂದು ಫಸಲು ಕೊಯ್ದು ರಾಶಿ ಮಾಡುವ ಹೊತ್ತಿಗೆ ನಾನು ಹೈರಾಣಾಗಿ ಹೋಗುತ್ತೇನೆ. ಕಥೆ ಇಲ್ಲಿಗೇ ಮುಗಿಯಲಿಲ್ಲ ಈಗ ಮಾರಾಟದ ಸರದಿ. ಮನೆಗೆ ಬೇಕಾಗುವಷ್ಟು ಧಾನ್ಯಗಳನ್ನು ಉಳಿಸಿಕೊಂಡು ಮಾರುಕಟ್ಟೆಗೆ ಉಳಿದ ಧಾನ್ಯಗಳನ್ನು ಚೀಲಗಳಲ್ಲಿ ತುಂಬಿಕೊಂಡು ಮಧ್ಯವರ್ತಿಗಳ, ದಲ್ಲಾಳಿಗಳ ಮೂಲಕ ಮಾರಾಟ ಮಾಡುವಷ್ಟರಲ್ಲಿ ಅರ್ಧಕ್ಕರ್ಧ ಬೆಳೆ ಮಾರಿದ ಹಣ ಕೈಬಿಟ್ಟು ಹೋಗುತ್ತದೆ. ಅಲ್ಲಿಯೂ ಕೂಡ ಎಲ್ಲರೂ ಒಂದೇ ಬೆಳೆ ಬೆಳೆದು ನಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೇ ಎಷ್ಟೋ ಬಾರಿ ನಾವು ಬೆಳೆದ ಬೆಳೆಯ ಕೇವಲ ಒಂದು ಪಾಲಿನಷ್ಟು ಉತ್ಪನ್ನ ನಮಗೆ. ಇದನ್ನೇ "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎಂದು ಹೇಳುವುದು. ಎಷ್ಟೋ ಸಾರಿ ಒಂದು ಬೆಳೆ ಬೆಳೆಯಲು ನಾವು ಇದರ ಒಂದೂವರೆ ಪಟ್ಟು ಹಣವನ್ನು ಹೆಚ್ಚು ಖರ್ಚು ಮಾಡಿಕೊಂಡಿರುತ್ತೇವೆ ಇದರ ಮೇಲೆ ಮಾನವ ಶ್ರಮ ಕೂಡ ...ಆದರೆ ಫಲಿತಾಂಶ ಶೂನ್ಯ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬ್ಯಾಂಕುಗಳು ನಾವು ರೈತರಿಗೆ ಬೆಳೆ ಸಾಲ, ಬೆಳೆ ವಿಮೆಯಂತಹ ಸಹಾಯವನ್ನು ಸರಕಾರಗಳ ನಿಯಮಾವಳಿಗಳ ಪ್ರಕಾರ ಮಾಡುತ್ತವೇನೋ ನಿಜ ಆದರೆ ಇದು "ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ" ಯಾತಕ್ಕೂ ಸಾಲದು. ಸರಕಾರಗಳು ಕಡಿಮೆ ದರದಲ್ಲಿ ಪೂರೈಸುವ ಬಿತ್ತನೆ ಬೀಜ, ಗೊಬ್ಬರ ಎಷ್ಟೋ ಬಾರಿ ಸಮಯ ಮೀರಿದ ನಂತರ ದೊರೆಯುತ್ತವೆ.... ಇಲ್ಲೂ ಕೂಡ ನಮಗೆ ಕಡಿತಗಳ ತೊಂದರೆಯೇ. ಆದರೂ ಕೂಡ ರೈತರು ಕಂಗೆಡಲಾರರು, ನಿಟ್ಟುಸಿರು ಬಿಡುತ್ತಲೇ ಸಮಾಧಾನ ಪಡುವರು.

ರೈತರ ಮೇಲೆ ಇನ್ನೂ ಒಂದು ಆರೋಪವಿದೆ... ಈ ಆರೋಪದಲ್ಲಿಯೂ ಹುರುಳಿಲ್ಲದೆ ಇಲ್ಲ. ಎಷ್ಟೋ ಸಾರಿ ಕುಟುಂಬದ ಜವಾಬ್ದಾರಿ ಹೊತ್ತ ಮನೆಯ ಯಜಮಾನ ಸರಕಾರದ ಸವಲತ್ತುಗಳಿಗಾಗಿ ಬ್ಯಾಂಕುಗಳ, ಕೃಷಿ ಸಹಾಯ ಕೇಂದ್ರಗಳ ಮುಂದೆ ಸರದಿ ಕಾಯುತ್ತಾನೆ. ಸುಳ್ಳು ಬೆಳೆ ವಿಮೆಯ ನಾಟಕವಾಡುತ್ತಾನೆ. ನಿರಂತರ ಮತ್ತು ಉಚಿತ ವಿದ್ಯುತ್, ನೀರಾವರಿ ಹಾಗೂ ಇನ್ನಿತರ ಸೌಲಭ್ಯಗಳಿಗೆ ಎಡತಾಕುತ್ತಾನೆ. ಆದರೆ ಆತನಿಗೆ ದೊರೆಯುವ ಸಹಾಯ ಸೌಲಭ್ಯಗಳು ಅತ್ಯಂತ ಕಡಿಮೆಯೇ. ಆತನಿಗೆ ಮನೆ ಕಟ್ಟಿಕೊಳ್ಳುವಷ್ಟು, ಐಷಾರಾಮಿ ಜೀವನವನ್ನು ನಡೆಸುವಷ್ಟು, ಕಾರು ಕೊಳ್ಳುವಷ್ಟು ಸಹಾಯವೇನು ದೊರೆಯುವುದಿಲ್ಲ... ದೈನಂದಿನ ಜೀವನವೇ ತ್ರಾಸದಾಯಕವಾಗಿರುವಾಗ ಆತ್ಮಭಿಮಾನಿಯಾಗಿರುವ, ಎದೆ ಸೆಟೆಸಿ ನಡೆಯುವ ರೈತ ಇಂತಹ ಸೌಲಭ್ಯಗಳನ್ನು ಪಡೆಯುವಾಗ ಒಮ್ಮೊಮ್ಮೆ ಕುಗ್ಗಿ ಹೋಗುವುದೂ ಉಂಟು. ಇನ್ನೂ ಕೆಲವು ಬಾರಿ ಕೈಸಾಲಗಳನ್ನು, ಬ್ಯಾಂಕಿನ ಸಾಲಗಳನ್ನು ಮರುಪಾವತಿ ಮಾಡಲಾಗದೆ, ಸಾಲ ವಸೂಲಾತಿಗೆ ಮನೆಯ ಮುಂದೆ ಸಾಲ ಕೊಟ್ಟವರು ಬಂದು ನಿಂತಾಗ ಅವಮಾನ ತಾಳಲಾರದೆ ಸಾವಿಗೆ ಶರಣಾಗುವುದು ಉಂಟು. ಒಟ್ಟಿನಲ್ಲಿ ನನ್ನಂತಹ ರೈತರ ಬಾಳು... ಅದೊಂದು ಮುಗಿಯಲಾರದ ಗೋಳು. ಇದು ಯಾವ ಉದ್ಯೋಗ ಕಡಿತಕ್ಕಿಂತಲೂ ಕಡಿಮೆಯಲ್ಲ. ಯಾವ ಪಿಂಕ್ ಸ್ಲಿಪ್ ಕೂಡ ಕೊಡದೆ ಪ್ರಕೃತಿ ಮತ್ತು ಹವಾಮಾನಗಳು ನಮ್ಮನ್ನು ಪರೀಕ್ಷಿಸುತ್ತದೆ.

ಸುಧಾರಿತ ಆರ್ಥಿಕ ಸೌಲಭ್ಯಗಳನ್ನು ನಾನು ಬಯಸದಿದ್ದರೂ ಒಮ್ಮೊಮ್ಮೆ ಭವಿಷ್ಯವೇ ಭೂತವಾಗಿ ಕಾಡುತ್ತದೆ. ನನ್ನ ಮಕ್ಕಳಿಗೆ ಸರಿಯಾದ ಬಟ್ಟೆ, ವಸತಿ, ವಿದ್ಯೆ ಮತ್ತು ಉತ್ತಮ ಭವಿಷ್ಯ ಒದಗಿಸುವಲ್ಲಿ ಸೋಲುತ್ತಿದ್ದೇನೆಯೆ ಎಂಬ ಭಾವ ಮಿಂಚಿ ಮರೆಯಾಗಿ ಹೋಗುತ್ತದೆ. ಆದರೂ ನಾನು ನಿಜವಾದ ರೈತ. ನನ್ನ ಬೆವರಿನ ಶ್ರಮದಲ್ಲಿಯೇ ನಿಮ್ಮೆಲ್ಲರ ಬದುಕಿದೆ. ನನ್ನಿಂದಲೆ ಈ ಜಗತ್ತು. ರೈತನ ಶ್ರಮದಾಯಕ ಬದುಕಿನ ಅಡಿಪಾಯದ ಮೇಲೆ ವ್ಯಾಪಾರಿಗಳ, ಉದ್ಯೋಗಿಗಳ, ನಾಡಿನ ಭವಿಷ್ಯ ನಿಂತಿದೆ... ಎಲ್ಲರ ಭವ್ಯ ಭವಿಷ್ಯದ ರೂವಾರಿಯಾದ ನನ್ನ ಭವಿಷ್ಯವೇ ಕತ್ತಲೆಯಲ್ಲಿ ಮುಳುಗಿದೆ. ಇನ್ನು ನಾಗರಿಕ ಸಮಾಜ ನನಗೆ ಕನಿಷ್ಠ ಮರ್ಯಾದೆಯನ್ನು ಕೊಡುವುದಿಲ್ಲ... ಮಾಲ್ ಗಳಲ್ಲಿ, ಶಾಪಿಂಗ್ ಕಾಂಪ್ಲೆಕ್ಸ್ ಗಳಲ್ಲಿ ಅವರು ಹೇಳಿದ ದರಕ್ಕೆ ಗೋಣು ಹಾಕಿ ಹಣ ಸಂದಾಯ ಮಾಡುವ, ದುಬಾರಿ ಹೋಟೆಲ್ಗಳಲ್ಲಿ ಒಂದು ಹೊತ್ತಿನ ಊಟಕ್ಕೆ ಸಾವಿರಾರು ರೂಗಳನ್ನು ಖರ್ಚು ಮಾಡುವ, ಫ್ರೀಜರ್ ಗಳಲ್ಲಿಟ್ಟು ಮಾಲ್ ಗಳಲ್ಲಿ ಮಾರಾಟ ಮಾಡುವ ಹಣ್ಣು, ತರಕಾರಿಗಳಿಗೆ ಅವರು ಕೇಳಿದಷ್ಟು ಹಣ ಕೊಡುವ ನಾಗರಿಕ ಸಮಾಜದ ಜನ ನಮ್ಮಂತ ರೈತರು ಬೆಳೆವ ಹಣ್ಣು, ತರಕಾರಿಗಳಿಗೆ ಅತ್ಯಂತ ಕಡಿಮೆ ಬೆಲೆಯನ್ನು ಕೇಳುತ್ತಾರೆ. ನಮ್ಮ ಪರಿಸ್ಥಿತಿಯೋ ಆ ದೇವರಿಗೇ ಪ್ರೀತಿ. ಕೊಡದೆ ಇದ್ದರೇ ನಮ್ಮ ಮೇಲೆ ರೋಪು ಹಾಕಿ ನಮ್ಮ ಮೇಲೆಯೇ ಸೊಕ್ಕಿನವರು ಎಂಬ ಆರೋಪ ಹೊರಿಸುತ್ತಾರೆ. ಒಂದೆರಡು ದಿನಗಳ ತಾಜಾತನವನ್ನು, ಜೀವಂತಿಕೆಯನ್ನು ಹೊಂದಿರುವ ತರಕಾರಿ, ಹಣ್ಣುಗಳನ್ನು ಅಂದಂದೇ ಮಾರಬೇಕಾದ ಪರಿಸ್ಥಿತಿ ನಮ್ಮದು. ಹಾಗಾಗಿ ನಾವು ಕೂಡ ಸಿಕ್ಕಷ್ಟಕ್ಕೆ ಹೋಗಲಿ ಎಂಬ ಅನಿವಾರ್ಯ ಭಾವದಿಂದ ಮಾರಾಟ ಮಾಡುತ್ತೇವೆ.

ದೇಶದ ಬೆನ್ನೆಲುಬಾದ ನಮ್ಮ ಬೆನ್ನೆಲುಬು ಮುರಿದಿದ್ದರೂ, ಮನೆಯ ಸೂರು ಸೋರುತ್ತಿದ್ದರೂ, ಆರ್ಥಿಕ ಅಭದ್ರತೆ ಕಾಡುತ್ತಿದ್ದರೂ, ಮಕ್ಕಳ ಭವಿಷ್ಯವೇ ಡೋಲಾಯಮಾನವಾಗಿದ್ದರೂ ನಾನು ಕಂಗೆಡುವುದಿಲ್ಲ. ನಮ್ಮನ್ನು ನೀವು ಪ್ರೋತ್ಸಾಹಿಸದಿದ್ದರೆ ಬೇಡ, ಬೆನ್ನು ತಟ್ಟದಿದ್ದರೂ ಪರವಾಗಿಲ್ಲ ಅವಮಾನಿಸಬೇಡಿ, ನಮ್ಮ ಮಕ್ಕಳು ನಿಮ್ಮಂತಿಲ್ಲವೆಂದು ಹೀಗಳೆಯಬೇಡಿ. ಬದುಕಿನ ಈ ಏರಿಳಿತದ ಹಾದಿಯಲ್ಲಿ ಪಲಾಯನವಾದಿಯಾಗದೆ ಕನಸುರಹಿತ ದಾರಿಯಲ್ಲಿ ನಿರಂತರ ಪಯಣ ಮುಂದುವರೆಸಿದ್ದೇನೆ .... ಅನಂತ ಭರವಸೆಯ ದೀಪ ಹೊತ್ತಿಸಿ.

– ಇಂತಿ ನಿಮ್ಮ ರೈತ

# ಪ್ರವಚನಗಳ ಸಾರ ಅರಿತರೆ ಬದುಕು ಬಂಗಾರ

## ಬುಕ್ಕಸಾಗರದ ಶ್ರೀಕರಿಸಿದ್ಧೇಶ್ವರ ವಿಶ್ವಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ | ಭಕ್ತರಿಂದ ಮಠ ಅಭಿವೃದ್ಧಿ
## ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಆಶೀರ್ವಚನ | ಶ್ರೀಕರಿಸಿದ್ಧೇಶ್ವರ ಪುರಾಣ ಆರಂಭಕ್ಕೆ ಚಾಲನೆ

■ ಹಂಪಿ ಟೈಮ್ಸ್ ಕಂಪ್ಲಿ

ಬುಕ್ಕಸಾಗರ ಶ್ರೀಕರಿಸಿದ್ಧೇಶ್ವರ ಶಿವಾಚಾರ್ಯರ ಲಿಂಗಾಂಗ ಸಾಮರಸ್ಯದ 12ನೇವರ್ಷದ ಪುಣ್ಯಸ್ಮರಣೋತ್ಸವ, ಶ್ರೀ ಕರಿಸಿದ್ಧೇಶ್ವರರ ಜಾತ್ರಾಮಹೋತ್ಸವ ನಿಮಿತ್ತ ಬುಕ್ಕನಟ್ಟಿಯ ಕರಿಬಸಯ್ಯ ಹಿರೇಮಠ ರಚಿಸಿದ ಶ್ರೀ ಕರಿಸಿದ್ಧೇಶ್ವರ ಲೀಲಾಮೃತ ಪುರಾಣ ಭಾನುವಾರ ಆರಂಭಗೊಂಡಿತು.

ಮರಿಯಮ್ಮನಹಳ್ಳಿಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಪುರಾಣ ಆರಂಭಕ್ಕೆ ಚಾಲನೆ ನೀಡಿ, ಪುರಾಣ ಪ್ರವಚನಗಳು ಬದುಕನ್ನು ಹಸನಗೊಳಿಸುತ್ತವೆ. ಸಂಕೀರ್ಣ ಬದುಕನ್ನು ತಿಳಿಗೊಳಿಸುವ ಮೂಲಕ ಸಾರ್ಥಕತೆಯನ್ನು ಮೂಡಿಸುತ್ತವೆ. ಗುರುಹಿರಿಯರ ಉಪದೇಶಗಳನ್ನ ಜೀವನ ದಲ್ಲಿ ಅಳವಡಿಸಿಕೊಳ್ಳಬೇಕು. ಕರಿಸಿದ್ಧೇಶ್ವರರ ಬದುಕು ಮತ್ತು ತತ್ವ ಆದರ್ಶಗಳು ಮಾದರಿಯಾಗಿವೆ ಎಂದರು.



ಬುಕ್ಕಸಾಗರದ ಶ್ರೀಕರಿಸಿದ್ಧೇಶ್ವರ ವಿಶ್ವಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯವಹಿಸಿ ಮಾತನಾಡಿ, ಕರಿಸಿದ್ಧೇಶ್ವರರ ತಪೋಶಕ್ತಿ ಯಿಂದ ಮಠದ ಅಭಿವೃದ್ಧಿ ಸಾಕಷ್ಟು ಉನ್ನತಿ ಸಾಧಿಸಿ, ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಸೇರಿ ನಾನಾ ವಲಯಗಳಲ್ಲಿ ಮಠ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದೆ ಎಂದರು.

ಪುರಾಣಕಾರರಾಗಿ ಮುದ್ದಾಪುರ ಕಂಬಳದಿನ್ನಿಯ ಶರಣಯ್ಯ ಶಾಸ್ತ್ರಿ, ಸಂಗೀತ ವಾಚಕರಾಗಿ ರಾಮಸಾಗರ ಸರ್ಕಾರಿ ಪ್ರೌಢಶಾಲೆಯ ಸಂಗೀತ ಶಿಕ್ಷಕ ರಾರಾವಿಯ ಚಿದಾನಂದ ಗವಾಯಿ, ಹಂಪಿ ಕನ್ನಡ ವಿವಿಯ ಕೆ.ದೊಡ್ಡಬಸಪ್ಪ ತಬಲಸಾತ್ ನೀಡಿದರು.

ಹಗರಿಬೊಮ್ಮನಹಳ್ಳಿಯ ಶ್ರೀ ಹಾಲಸ್ವಾಮಿಗಳು, ಸಾಂಗತ್ರಯ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಚಾರ್ಯ ಎಂ.ಎಸ್.ಶಶಿಧರಶಾಸ್ತ್ರಿ, ಬುಕ್ಕಸಾಗರ ಪಾಠಶಾಲೆ ಪ್ರಾಚಾರ್ಯ ವೀರಯ್ಯಸ್ವಾಮಿ, ಪ್ರಮುಖರಾದ ಹಾವಳಗಿ ರುದ್ರಯ್ಯಸ್ವಾಮಿ, ಎಚ್.ಎಂ.ವಿಶ್ವನಾಥ, ಎಸ್.ಡಿ.ಬಸವರಾಜ, ಕ್ಯಾದಿಗೆಹಾಳ್ ಗಂಗಾಧರಸ್ವಾಮಿ, ಸಂತೋಷ್ ಕುಮಾರ್, ನಾನಾ ಕಡೆಗಳಿಂದ ಆಗಮಿಸಿದ ಮಠದ ಸದ್ಭಕ್ತರು ಇದ್ದರು.

# ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಆಗ್ರಹ

## ಸಿಎಂ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿ : ರೈತರು

■ ಹಂಪಿ ಟೈಮ್ಸ್ ಕಂಪ್ಲಿ

ಪಟ್ಟಣದಲ್ಲಿ ಸಹಕಾರಿ ಇಲ್ಲವೇ ಸರ್ಕಾರಿ ವಲಯದ ಸಕ್ಕರೆ ಕಾರ್ಖಾನೆ ಸ್ಥಾಪಿಸುವಂತೆ ಆಗ್ರಹಿಸಿ, ಇಲ್ಲಿನ ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ಪದಾಧಿಕಾರಿಗಳು ಉದ್ಭವ ಮಹಾಗಣಪತಿ ಗುಡಿಯಿಂದ ಪ್ರತಿಭಟನೆ ಮೆರವಣಿಗೆ ಸಾಗಿ ಅಂಬೇಡ್ಕರ್ ವೃತದಲ್ಲಿ ಸೋಮವಾರ ತಹಸೀಲ್ದಾರ್ ಎಸ್.ಶಿವರಾಜಗೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾಧ್ಯಕ್ಷ ಬಿ.ಗಂಗಾಧರ ಮತನಾಡಿ, ಪಟ್ಟಣದಲ್ಲಿ ಹಿಂದೆ ಇದ್ದ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆ ನಾನಾ ಷಡ್ಯಂತ್ರಗಳಿಂದಾಗಿ ನಶಿಸಿ ಹೋಗಿದ್ದು, ಇದೀಗ ಅದೇ ಭೂಮಿಯಲ್ಲಿ ಸರ್ಕಾರ ಸಕ್ಕರೆ ಕಾರ್ಖಾನೆ ಸ್ಥಾಪಿಸಬೇಕಿದೆ. 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕುರುಗೋಡಿನ ಪ್ರಚಾರ ಭಾಷಣದಲ್ಲಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಕಂಪ್ಲಿಯಲ್ಲಿ ಸಕ್ಕರೆ ಕಾರ್ಖಾನೆಯ ಜಾಗೆಯನ್ನು ವಶಪಡಿಸಿಕೊಂಡು ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಮಾತು ಕೊಟ್ಟಿದ್ದು,



ಅದರಂತೆ ನಡೆದು ಕೊಳ್ಳಬೇಕಿದೆ. ಈಗಾಗಲೇ ಪರಿಸರ ಇಲಾಖೆ ಸಭೆ ನಡೆಸಿ ಸಕ್ಕರೆ ಕಾರ್ಖಾನೆ ಅಗತ್ಯವಿದೆ ಎಂದು ಸರ್ಕಾರಕ್ಕೆ ವರದಿ ನೀಡಿದೆ. ಮೇಲಾಗಿ ಸಕ್ಕರೆ ಕಾರ್ಖಾನೆಗೆ ಅಗತ್ಯ ನೀರನ್ನು ಬಳಸಿಕೊಳ್ಳಲು ನೀರಾವರಿ ಇಲಾಖೆಯಿಂದ ಅನುಮತಿ ದೊರಕಿದೆ. ಗಂಗಾವತಿ-ದರೋಜಿ ವಯಾ ಕಂಪ್ಲಿ ಮೂಲಕ ಬ್ರಾಡ್‌ಗೇಜ್ ರೈಲು ಸಂಪರ್ಕಕ್ಕೆ ಸಮೀಕ್ಷೆಯೂ ಮುಗಿದಿದೆ. ಸಕ್ಕರೆ ಕಾರ್ಖಾನೆ ಸ್ಥಾಪನೆ ಅನುಕೂಲಕರ ವಾತಾವರಣವಿದ್ದು ಕೂಡಲೇ ಸಕ್ಕರೆ ಕಾರ್ಖಾನೆ ಸ್ಥಾಪನೆ ಪ್ರಕ್ರಿಯೆಗೆ ಚಾಲನೆ ನೀಡಬೇಕು. ಉದಾಸೀನಾ ತೋರಿದಲ್ಲಿ ಕಂಪ್ಲಿಯಿಂದ ಜಿಲ್ಲಾಧಿಕಾರಿ ಕಚೇರಿತನಕ ಪಾದಯಾತ್ರೆ ಹೋರಾಟ ಹಮ್ಮಿಕೊಳ್ಳ ಲಾಗುವುದು ಎಂದರು. ಮನವಿ ಸಲ್ಲಿಸುವಲ್ಲಿ ಪದಾಧಿಕಾರಿಗಳಾದ ವಿ.ಉಷಾ ದೇವೇಂದ್ರ, ಗೌಡ್ರು ಅಮರನಾಥ, ಬಿ. ಶಿವಪ್ಪಸ್ವಾಮಿ, ಜೆ.ಮಂಜುನಾಥ, ಜಿ. ವೆಂಕಟೇಶ, ಬಿ.ಕುಬೇರಪ್ಪ, ಯು.ಹುಲುಗಪ್ಪ, ಸಿ.ಮಲ್ಲಿಕಾರ್ಜುನ, ಎನ್.ಶಿವಪ್ಪ, ಬಿ. ಸೋಮಪ್ಪ, ಶಿವಪ್ಪ, ಕುರಿ ನಾಗಪ್ಪ ಸೇರಿ ಇತರರಿದ್ದರು.

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**24-12-2024 – ಮಂಗಳವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 07:06:34 |
| ಸೂರ್ಯಾಸ್ತ | : 17:46:56 |
| ರಾಹು ಕಾಲ | : 15:07-16:27 |
| ಯಮಘಂಡ ಕಾಲ | : 09:47-11:07 |
| ಗುಳಿಕ ಕಾಲ | : 12:27-13:47 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 23-12-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.17 ಅಡಿ |
| ಒಳ ಹರಿವು | 933 ಕ್ಯುಸೆಕ್ |
| ಹೊರ ಹರಿವು | 7409 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 87.345 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.64 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 882 ಕ್ಯುಸೆಕ್ |
| ಸಾಮರ್ಥ್ಯ | 10.735 ಟಿಎಂಸಿ |

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ, ಪತ್ರಿಕೆಗಾಗಿ ಪತ್ರಿಕೆ ವಿತರಕರನ್ನು ಸಂಪರ್ಕಿಸಿ
ಇ-ಪೇಪರ್‌ಗಾಗಿ ಭೇಟಿ ನೀಡಿ.
www.epaper.hampitimes.com

# ಕುರಿಗಾರರಿಗೆ ಸೌಲಭ್ಯ ತಲುಪಿಸಿ

## ಕೊಪ್ಪಳ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ರತ್ನಂ ಪಾಂಡೇಯ ಸೂಚನೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಕುರಿಗಾರರಿಗೆ ಸರ್ಕಾರದ ಯೋಜನೆಗಳ ಸೌಲಭ್ಯ ತಲುಪಿಸುವಂತೆ ಪಶು ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ಕುರಿಗಾರರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದರು.



ಕುರಿ-ಮೇಕೆ ಸಾಕಾಣಿಕೆಗೆ ಮತ್ತು ಕುರಿಗಾರರಿಗೆ ಸರ್ಕಾರವು ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ, ಸಹಾಯಧನ ಸೌಲಭ್ಯ, ಅಗತ್ಯ ಪರಿಕರಗಳ ವಿತರಣೆ ಮತ್ತು ಜಾನುವಾರುಗಳಿಗೆ ಲಸಿಕೆ ಹೀಗೆ ವಿವಿಧ ಸೌಲಭ್ಯಗಳನ್ನು ನೀಡುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಜಿಲ್ಲೆಯ ಕುರಿಗಾರರಿಗೆ ಜಾಗೃತಿ ಮೂಡಿಸಬೇಕು. ಸರ್ಕಾರದ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಪ್ರಮಾಣ ಶೇ100 ರಷ್ಟಾಗಬೇಕು ಮತ್ತು ಸೌಲಭ್ಯ ವಿತರಣೆಯಲ್ಲೂ ಜಿಲ್ಲೆಯ ಪ್ರಗತಿ ಹೆಚ್ಚಾಗಬೇಕು. ಬಹಳಷ್ಟು ಕುರಿಗಾರರಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಹೇಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂಬುವುದು ತಿಳಿದಿರುವುದಿಲ್ಲ ಎಂದರು.

ಸಂಚಾರಿ ಮತ್ತು ವಲಸೆ ಕುರಿಗಾರರಿಗೆ ಗುರುತಿನ ಚೀಟಿ ನೀಡುವ ಸರ್ಕಾರಿ ಆದೇಶದಂತೆ ಅಗತ್ಯ ಕ್ರಮ ಜರುಗಿಸಿ. ಅನುಗ್ರಹ ಯೋಜನೆಯಡಿ ಸತ್ತ ಕುರಿ-ಮೇಕೆಗಳಿಗೆ ಪರಿಹಾರ ವಿತರಣೆಯಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಅನುದಾನಕ್ಕಾಗಿ ಜಿಲ್ಲೆಯ ಕುರಿಗಾರರ ಬೇಡಿಕೆಯೊಂದಿಗೆ ಕೇಂದ್ರ ಕಚೇರಿಗೆ ಪತ್ರ ಬರೆದು ಪರಿಹಾರ ವಿತರಿಸುವಂತೆ ಕ್ರಮ ಕೈಗೊಳ್ಳಬೇಕು. ಕುರಿಗಳನ್ನು ಮಳೆಯಿಂದ ಸಂರಕ್ಷಣೆಗೆ ತಾಡಪಾಲ ಶೆಡ್, ವಲಸೆ ಕುರಿಗಾರರ ಸಂರಕ್ಷಣೆಗೆ ತಾತ್ಕಾಲಿಕ ಶೆಡ್ ನಿರ್ಮಾಣ ಮತ್ತು ಕಂಬಳಿಗಳ ವಿತರಣೆ, ಸತ್ತ ಕುರಿ ಮೇಕೆಗಳಿಗೆ ಪರಿಹಾರ ಹಾಗೂ ಕುರಿಗಾರರ ಇತರೆ ಬೇಡಿಕೆಗಳ ಪಟ್ಟಿ ತಯಾರಿಸಿ ಯೋಜನೆಯ ಅಳವಡಿಕೆ ಮತ್ತು ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಪಶು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ಕುರಿಗಾರರ ಮಕ್ಕಳು ಯಾವುದೇ ಕಾರಣಕ್ಕೂ ಶಿಕ್ಷಣದಿಂದ ವಂಚಿತರಾಗಬಾರದು. ಈ ಹಿಲ್ಲೆಯಲ್ಲಿ ಪಶು ವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕುರಿಗಾರರ ಸಂಘಗಳ ಸಹಕಾರದೊಂದಿಗೆ ಕುರಿಗಾರರ ಮಕ್ಕಳ ಶಿಕ್ಷಣದ ಸ್ಥಿತಿಗತಿಗಳ ಬಗ್ಗೆ ವರದಿ ಸಲ್ಲಿಸಬೇಕು. ಜಿಲ್ಲೆಯಲ್ಲಿರುವ ಪಶು ವೈದ್ಯರ ಕೊರತೆಯನ್ನು ನೀಗಿಸಲು ಅತಿಥಿ ಶಿಕ್ಷಕರ ರೀತಿಯಲ್ಲಿ ಜಿಲ್ಲೆಯ ಪಶು ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳಬೇಕು. ಇದಕ್ಕಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ ಸದ್ಬಳಕೆ ಮಾಡಿಕೊಳ್ಳಲು ಅವಕಾಶವಿದ್ದು, ಪಶು ವೈದ್ಯಾಧಿಕಾರಿಗಳ ಸೇವೆಯನ್ನು ತ್ವರಿತವಾಗಿ ಪಡೆದುಕೊಳ್ಳುವಂತೆ ಸೂಚಿಸಿದರು.

ಅಳವಂಡಿ ಹೋಬಳಿಯ ಹಲಗೇರಿ ಗ್ರಾಮದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಗುಡದಪ್ಪ ಬಸಪ್ಪ ಬನ್ನಪ್ಪನವರ ಮಾತನಾಡಿ, ಅಮೃತ ಯೋಜನೆಯಡಿ ಅರ್ಜಿ ಸಲ್ಲಿಸಿ, ಒಂದು ವರ್ಷ ಕಳೆದರೂ ಸಹ ಫಲಾನುಭವಿಗಳಿಗೆ ಸೌಲಭ್ಯಗಳು ಇನ್ನೂ ಸಿಗುತ್ತಿಲ್ಲ. ಕೂಡಲೇ ಯೋಜನೆಯ ಲಾಭವನ್ನು ಅರ್ಹ ಕುರಿಗಾರರಿಗೆ ತಲುಪಿಸುವ ಕೆಲಸವನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಡಬೇಕು. ನಮ್ಮ ಕುರಿಗಾಯಿಗಳಿಗೆ ಸರ್ಕಾರದ ಯೋಜನೆಗಳ ಲಾಭ ಸಮರ್ಪಕವಾಗಿ ತಲುಪಿಸಲು ಇನ್ನೂ ಹೆಚ್ಚಿನ ಕೆಲಸ ಮಾಡಬೇಕಿದೆ ಎಂದರು.

ಗಂಗಾವತಿಯ ಹಿಮಾಲಯ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರಿ ಸಂಘದ ಕಾರ್ಯನಿರ್ವಹಣಾಧಿಕಾರಿ ಕೆ.ಬಿ ಜೂಡಿ ಮಾತನಾಡಿ, ಮಾರುಕಟ್ಟೆಯಲ್ಲಿ ಕುರಿಗಳನ್ನು ಮಾರಾಟ ಮಾಡಲು ವಾರದಲ್ಲಿ ಒಮ್ಮೆ ಪ್ರತಿ ಶುಕ್ರವಾರದಂದು ಕುಕನಪಳ್ಳಿಯಲ್ಲಿ ಸಂತೆ ನಡೆಯುತ್ತದೆ. ಇದರೆ ಜೊತೆಗೆ ಡಿಜಿಟಲ್ ಮಾರುಕಟ್ಟೆ ಅತ್ಯವಶ್ಯಕವಾಗಿದ್ದು, ಗಂಗಾವತಿ ಮಾರುಕಟ್ಟೆ ಸಮಿತಿಯಲ್ಲಿ ಡಿಜಿಟಲ್ ತೂಕದ ಯಂತ್ರವನ್ನು ಅಳವಡಿಸಬೇಕು ಎಂದರು.

ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ ಪಿ.ಎಂ ಮಲ್ಲಯ್ಯ ಅವರು ಮಾತನಾಡಿ, ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಸಾಲ ಪಡೆಯಲು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, 2025ರ ಮಾರ್ಚ್ 31ರವರೆಗೆ ಅವಕಾಶವಿರುತ್ತದೆ. ಆಸಕ್ತ ಕುರಿಗಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕ ಡಾ ಆನಂದ ದೇವರನಾವದಗಿ ಮಾತನಾಡಿ, ಕುರಿ ಹಾಗೂ ಮೇಕೆಗಳಿಗೆ ಔಷಧಿಗಳ ವಿತರಣೆಗಾಗಿ ಕೇಂದ್ರ ಕಚೇರಿಗೆ ಈಗಾಗಲೇ ಬೇಡಿಕೆ ಸಲ್ಲಿಸಲಾಗಿದ್ದು, ಸರಬರಾಜು ಆದ ತಕ್ಷಣ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕೊಪ್ಪಳದ ಜೈ ಭೀಮ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಮಹಾಲಕ್ಷ್ಮೀ ಲಕ್ಷ್ಮಣ ಕಂದಾರಿ ಮಾತನಾಡಿದರು.

ಸಭೆಯಲ್ಲಿ ಮುಖ್ಯ ಪಶು ವೈದ್ಯಾಧಿಕಾರಿಗಳಾದ ಡಾ ವಿನೋದ ಕುಮಾರ ದಿವಟರ, ಡಾ ಶಿವರಾಜ ಎಂ ಶೆಟ್ಟರ, ಡಾ ಚನ್ನಬಸಪ್ಪ ಹಳ್ಳದ, ಡಾ. ಪ್ರಕಾಶ ಚೂರಿ, ಡಾ ಜಾಕೀರ ಹುಸೇನ್, ಕುರಿಗಾರರಾದ ಮುಕ್ಕುಂದಪ್ಪ ಅಳವಂಡಿ, ಮಹಾಂತಪ್ಪ ಹನವಾಳ ಸೇರಿದಂತೆ ಜಿಲ್ಲೆಯ ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಸದಸ್ಯರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಗಣಿತ ಕಲಿಯುವ ಆಸಕ್ತಿ ರೂಢಿಸಿಕೊಳ್ಳಿ

ಮೊದಲ ಪುಟದಿಂದ

ಸೊನ್ನೆಯ ಮಹತ್ವ ಪ್ರತಿಯೊಬ್ಬರಿಗೂ ತಿಳಿದಿದೆ. ಸೊನ್ನೆಯ ಪರಿಕಲ್ಪನೆ ನೀಡಿದ ಶ್ರೇಯಸ್ಸು ಭಾರತಕ್ಕಿದೆ. ಶ್ರೀನಿವಾಸ ರಾಮಾನುಜನ್ ಅಯ್ಯಂಗಾರ್, ಆರ್ಯಭಟ ಸೇರಿದಂತೆ ಇನ್ನೂ ಅನೇಕ ಭಾರತೀಯರು ಗಣಿತ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಇದೇ ವೇಳೆ ಶ್ರೀನಿವಾಸ ರಾಮಾನುಜನ್ ಅಯ್ಯಂಗಾರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದ ಬಳಿಕ ಕೆಪಿಎಸ್ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿನಿಯರಿಂದ ತಯಾರಿಸಲ್ಪಟ್ಟ ಗಣಿತ ಮ್ಯಾಗಜಿನ್ ಅನ್ನು ಲೋಕಾರ್ಪಣೆಗೊಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸರ್ಕಾರಿ (ಮಾಪು) ಪಿಯು ಕಾಲೇಜಿನ ಉಪನ್ಯಾಸಕರಾದ ಡಾ.ಯು.ಶ್ರೀನಿವಾಸ್ ಮೂರ್ತಿ ಅವರು ರಾಮಾನುಜನ್-ಸ್ಕ್ವಯರ್ ಕುರಿತು ವಿಶೇಷ ಉಪನ್ಯಾಸ ನೀಡಿದರು. ವಿದ್ಯಾರ್ಥಿನಿಯರು ಭಾಷಣ ಮಾಡಿದ್ದು ವಿಶೇಷವಾಗಿತ್ತು. ಈ ವೇಳೆ ಎನ್‌ಐಸಿ ಬಳ್ಳಾರಿ ಕೇಂದ್ರದ ಸಿ.ವೆಂಕಟರಮಣ ಮೂರ್ತಿ, ಜಿಪಂ ಜಿಲ್ಲಾ ಯೋಜನಾ ಸಂಯೋಜಕರಾದ ರಾಮಚಂದ್ರ ರೆಡ್ಡಿ.ಜಿ.ಬಿ., ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಸುರೇಖಾ ಸೇರಿದಂತೆ ಕೆಪಿಎಸ್ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಇಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಡಿ.24ರಂದು ಬೆಳಿಗ್ಗೆ 10 ಗಂಟೆಗೆ ಅಲ್ಲಿಪುರ ರಸ್ತೆಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾ ಭವನದಲ್ಲಿ ಆಯೋಜಿಸಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕೆ.ಜಿ.ಶಾಂತಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ತಿಪ್ಪೇಸ್ವಾಮಿ.ಎನ್ ಅವರು ಉಪಸ್ಥಿತರಿರಲಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಅಧ್ಯಕ್ಷತೆಯಲ್ಲಿ ಜರುಗಲಿದೆ.




# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು


ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

## ವೀರಲವ – ಪದ್ಯ (ಪ್ರ.ಭಾ. ಕನ್ನಡ)

**ಕವಿ ಪರಿಚಯ– ಲಕ್ಷ್ಮೀಶ**





ಕವಿ ಲಕ್ಷ್ಮೀಶನು ಕ್ರಿ.ಶ. ಸುಮಾರು 1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು. ಇವನಿಗೆ ಲಕ್ಷ್ಮಿ ರಮಣ. ಲಕ್ಷ್ಮಿಪತಿ ಎಂಬ ಹೆಸರುಗಳು ಇದ್ದವು. ಇವನು ಜೈಮಿನಿ ಭಾರತ ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ ಉಪಮಾಲೋಲ, ಕರ್ಣಾಟ ಕವಿ ಚೂತವನ ಚೈತ್ರ ಎಂಬ ಬಿರುದುಗಳಿದ್ದವು.

ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.

**1. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು ?**

ಉತ್ತರ– ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.

**2. ಯಜ್ಞಾಶ್ವವನ್ನು ಕಟ್ಟಿದವರು ಯಾರು ?**

ಉತ್ತರ– ಯಜ್ಞಾಶ್ವವನ್ನು ಕಟ್ಟಿದವರು ಲವ.

**3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?**

ಉತ್ತರ– ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

**4. ಮುನಿಸುತರು ಹೆದರಲು ಕಾರಣವೇನು ?**

ಉತ್ತರ– ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

ಉತ್ತರ– ಶ್ರೀ ರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳಿಸಿದನು. ರಾಮನ ಆಜ್ಞೆಯಂತೆ ಹೊರಟ ಯಘ್ನಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲಾ ಸಂಚರಿಸುತ್ತಾ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?**

ಉತ್ತರ– ಯಜ್ಞಾಶ್ವ ದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಭೂಮಂಡಲದಲ್ಲಿ ಕೌಸಲ್ಯಯ ಮಗನಾದ ರಾಮನು ಒಬ್ಬನೇ ವೀರನು. ಇದು ಆತನ ಯಜ್ಞ ಕುದುರೆ, ಇದನ್ನು ತಡೆಯುವ ಸಾಮರ್ಥ್ಯ ಉಳ್ಳವರು ಯಾರೇ ಆದರೂ ತಡೆಯಲಿ ಎಂದು ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

ಉತ್ತರ– ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರಿಯದಿಂದ ಬಾಳೆ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡ ಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯುವರು" ಎಂದು ಹೇಳಿದರು. ಆಗ ಲವನು ನಗುತಾ" ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ , ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**1." ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**

ಆಯ್ಕೆ– ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ಜೆಮಿನಿ ಭಾರತ ಮಹಾಕಾವ್ಯದಿಂದ ಆಯ್ದ ವೀರಲವ ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ– ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀ ರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ– ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು, ವೀರ ಕ್ಷತ್ರಿಯ ವಂಶದಿಂದ ಬಂದ ತನ್ನ ತಾಯಿಗೂ ಅವಮಾನ ಎಂಬುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**2. "ಜಾನಕಿಯ ಮಗನಿದಕೆ ಬೆದರುವನೆ"**

ಆಯ್ಕೆ– ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ಜೈಮಿನಿ ಭಾರತ ಮಹಾಕಾವ್ಯದಿಂದ ಆಯ್ದ ವೀರಲವ ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ– ವೀರಲವನು ತನ್ನ ಉತ್ತರಿಯದಿಂದ ಯಜ್ಞಾಶ್ವವನ್ನು ಬಾಳೆ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಸುತರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

ಸ್ವಾರಸ್ಯ– ವೀರ ಜನಕ ಮಹಾರಾಜನ ಮಗಳಾದ ತನ್ನ ತಾಯಿಯ ವಂಶಕ್ಕೆ ಅಪಮಾನ ಮಾಡಿದಂತೆ ಎಂಬ ಹಿನ್ನೆಲೆಯ ನುಡಿಯು ಹಾಗೂ ಲವನ ಧೈರ್ಯವು ಈ ಮಾತಿನಲ್ಲಿ ಅಭಿವ್ಯಕ್ತವಾಗಿದೆ.

**3." ಅರಸುಗಳ ವಾಜಿಯಂ ಬಿಡು"**

ಆಯ್ಕೆ– ಈ ವಾಕ್ಯವನ್ನು ಲಕ್ಷ್ಮೀಶನು ರಚಿಸಿರುವ ಜೈಮಿನಿ ಭಾರತ ಮಹಾಕಾವ್ಯದಿಂದ ಆಯ್ದ ವೀರಲವ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ– ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವ ವನ್ನು ಬಾಳೆ ಗಿಡಕ್ಕೆ ಕಟ್ಟಿ ಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ– ರಾಜರ ಯಜ್ಞಾಶ್ವನ್ನು ಕಟ್ಟಿ ಹಾಕುವುದು ಅಪರಾಧ. ಆದ್ದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿ ಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ